# ಹರಪನಹಳ್ಳಿ ತಾಲೂಕಿನ ರಕ್ಷಣಾ ಸ್ಮಾರಕಗಳು

## ಶಬ್ದ ಪಾರಮಾರ್ಗಮಶಕ್ಯಂ

ಕರ್ನಾಟಕದ ಆಧುನಿಕ ಚರಿತ್ರೆಯಲ್ಲಿ ಕರ್ನಾಟಕ ಏಕೀಕರಣ ಒಂದು ಮಹತ್ವಪೂರ್ಣ ಐತಿಹಾಸಿಕ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯೂ ಮತ್ತೊಂದು ಮಹತ್ವದ ಘಟನೆ. ಕನ್ನಡ - ಕನ್ನಡಿಗ - ಕರ್ನಾಟಕ ಸಂಸ್ಕೃತಿಯ ಕಲ್ಪನೆಯಡಿಯಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯದ ಹರವು ವಿಸ್ತಾರವಾದದ್ದು. ಈ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯದ ಆಶಯ ಮತ್ತು ಗುರಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಹಾಗೂ ಪ್ರಗತಿಪರ. ಕನ್ನಡದ ಸಾಮರ್ಥ್ಯವನ್ನು ಎಚ್ಚರಿಸುವ ಕಾಯಕವನ್ನು ಉದ್ದಕ್ಕೂ ಅದು ನೋಂಪಿಯಿಂದ ಮಾಡಿಕೊಂಡು ಬಂದಿದೆ. ಕರ್ನಾಟಕತ್ವದ 'ವಿಕಾಸ' ಈ ವಿಶ್ವವಿದ್ಯಾಲಯದ ಮಹತ್ತರ ಆಶಯವಾಗಿದೆ.

ಕನ್ನಡ ಅಧ್ಯಯನ ಮೂಲತಃ ಶುದ್ಧ ಜ್ಞಾನದ, ಕಾಲ, ದೇಶ, ಜೀವನ ತತ್ವದ ಪರವಾಗಿರುವುದರ ಜೊತೆಗೆ ಅಧ್ಯಯನವನ್ನು ಒಂದು ವಾಗ್ವಾದದ ಭೂಮಿಕೆ ಎಂದು ನಾವು ಭಾವಿಸಬೇಕಾಗಿದೆ. ಕನ್ನಡ ಬದುಕಿನ ಚಿಂತನೆಯ ಭಾಗವೆಂದೇ ಅದನ್ನು ರೂಪಿಸಿ ವಿವರಿಸಬೇಕಾದೆ. ಅಂದರೆ : ದೇಸಿ ಬೇರುಗಳ ಗುರುತಿಸುವಿಕೆ ಕನ್ನಡ ಅಧ್ಯಯನದ ಮುಖ್ಯ ಭಿತ್ತಿಯಾಗಬೇಕಾಗಿದೆ. ಕನ್ನಡ ಸಂಸ್ಕೃತಿಯು ಬಹುತ್ವದ ನೆಲೆಗಳನ್ನು ಆಧರಿಸಿ ರೂಪುಗೊಂಡಿದೆ. ಸಮಾಜಮುಖಿ ಚಿಂತನೆಗಳ ವ್ಯಾಪಕ ಅಧ್ಯಯನ ಬದುಕಿನ ಸಂಕೀರ್ಣ ಲಕ್ಷಣಗಳ ಸ್ವರೂಪವನ್ನು ಇದು ಪರಿಚಯಿಸುತ್ತದೆ. ನಾವು ಇದನ್ನು ಎಲ್ಲ ವಲಯಗಳಲ್ಲಿ ಕನ್ನಡದ ಅನುಷ್ಠಾಬದ ಮೂಲಕ ಉಳಿಸಿ, ಬೆಳೆಸಬೇಕಾಗಿದೆ. ಆಗ ಕನ್ನಡ ಸಂಸ್ಕೃತಿಯು ವಿಶ್ವಪ್ರಜ್ಞೆಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. 'ಕನ್ನಡದ್ದೇ ಮಾದರಿ' ಯ ಶೋಧ ಇಂದಿನ ಮತ್ತು ಬರುವ ದಿನಗಳ ತೀವ್ರ ಅಗತ್ಯವಾಗಿದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳಿವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ವಿದೇಶಿ ಮತ್ತು ದೇಶಿ ವಿದ್ವಾಂಸರು ತೊಡಗಿಸಿಕೊಂಡ ಈ ವಿದ್ವತ್‌ಕ್ಷೇತ್ರದಲ್ಲಿ ಮುಂದಿನ ವಿದ್ವಾಂಸರು ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬಂದಿದ್ದಾರೆ. ಕನ್ನಡ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ, ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿಕೊಳ್ಳುತ್ತ ಬಂದಿರುವುದು ಗಮನಿಸತಕ್ಕ ಅಂಶ. ಸಾಂಪ್ರದಾಯಿಕ ಚಿಂತನೆಗಳು ಆಧುನೀಕರಣದ ಈ ಕಾಲಘಟ್ಟದಲ್ಲಿ ಸಕಾಲಿಕಗೊಳ್ಳುವುದು ಅನಿವಾರ್ಯವಾಗಿದೆ. ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ ಜ್ಞಾನಪ್ರವಾಹವೇ ನಮ್ಮ ಅಂಗೈಯೊಳಗೆ ಚುಳುಕಾಗುವ ಈ ಸಂದರ್ಭದಲ್ಲಿ ಕನ್ನಡದ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆಯನ್ನು ಶೋಧಿಸಲಿಕ್ಕೆ ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಅನುಲಕ್ಷಿಸಿ, ಭಾಷಾನೀತಿ, ಭಾಷಾಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ ಬಳಕೆಯ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾನಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ವೈದ್ಯ, ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನಶಾಖೆಗಳಲ್ಲಿ ಹುದುಗಿರುವ ದೇಶಿ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ ಪರಿಕರಗಳ ನಿರ್ಮಾಣದ ನೆಲೆ ತುಂಬ ಮುಖ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕಳೆದ ಹದಿನಾರು ವರ್ಷಗಳಿಂದ ಈ

ಕೆಲಸಗಳನ್ನು ಹಲವು ಯೋಜನೆಗಳ ಮೂಲಕ ರೂಪಿಸಿಕೊಂಡಿದೆ, ರೂಪಿಸಿಕೊಳ್ಳುತ್ತಿದೆ. ಇದೊಂದು ಚಲನಶೀಲ ಪ್ರಕ್ರಿಯೆಯಾಗಿದೆ. ಸಮಕಾಲೀನ ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತ ಕನ್ನಡ ನಾಡುನುಡಿಯನ್ನು ಹೊಸದಾಗಿ ಶೋಧಿಸುತ್ತಾ, ವಿವರಿಸುತ್ತಾ ಬಂದಿದೆ. ಅಂದರೆ : ಕನ್ನಡದ ಅರಿವಿನ ವಿಕೇಂದ್ರೀಕರಣವೇ ವರ್ತಮಾನದ ಹೊಸ ಬೆಳವಣಿಗೆ. ಇದು ಕನ್ನಡ ವಿಶ್ವವಿದ್ಯಾಲಯದ ಜೀವಧಾತುವಾಗಿದೆ.

ಕನ್ನಡ ವಿಶ್ವವಿದ್ಯಾಲಯವು ಕನ್ನಡದ ಹತ್ತಾರು ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಕುರಿತು ಸಾಮಾನ್ಯ ಓದುಗರಿಗೆ ಅರಿವನ್ನು ನೀಡಲು ಮಂಟಪಮಾಲೆಯಲ್ಲಿ ಕಿರುಪುಸ್ತಕಗಳನ್ನು ಪ್ರಕಟಿಸುತ್ತಿದೆ. 'ದೊಡ್ಡೇರಿ ಕದನ : ಚರಿತ್ರೆ ಮತ್ತು ಜಾನಪದಗಳ ನೆಲೆಯಲ್ಲಿ' ಎಂಬ ಕಿರುಹೊತ್ತಿಗೆಯನ್ನು ಈ ಮಾಲೆಗಾಗಿ ಬರೆದುಕೊಟ್ಟಿರುವ ಪ್ರೊ. ಲಕ್ಷ್ಮಣ್ ತೆಲಗಾವಿ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತದೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಗದ ನಿರ್ದೇಶಕರಾದ ಡಾ.ಮಂಜುನಾಥ ಬೇವಿನಕಟ್ಟಿ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಬಿ.ಸುಜ್ಞಾನ ಮೂರ್ತಿ ಮತ್ತು ಶ್ರೀ ಕೆ.ಎಲ್. ರಾಜಶೇಖರ್ ಅವರಿಗೆ ಆಭಾರಿಯಾಗಿದ್ದೇನೆ.

**ಡಾ. ಎ. ಮುರಿಗೆಪ್ಪ**
ಕುಲಪತಿ

## ೧. ಉಚ್ಚಂಗಿದುರ್ಗ

ಉಚ್ಚಂಗಿದುರ್ಗವು ದಾವಣಗೇರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನಲ್ಲಿದ್ದು, ಹರಪನಹಳ್ಳಿಯಿಂದ ದಕ್ಷಿಣಕ್ಕೆ ದಾವಣಗೇರಿಯಿಂದ ಉತ್ತರಕ್ಕೆ ೨೮ ಕಿ.ಮೀ ಸಮಾನ ಅಂತರದಲ್ಲಿದೆ. ಉಚ್ಚಂಗಿದುರ್ಗದ ಬೆಟ್ಟವು ಸಮುದ್ರ ಮಟ್ಟದಿಂದ ೨೯.೭೫ ಅಡಿ ಎತ್ತರವಾಗಿದೆ. ಈ ಬೆಟ್ಟವನ್ನು ಸುತ್ತುವರೆದಿರುವ ಕೋಟೆಯ ಗಿರಿದುರ್ಗಗಳ ಸಾಲಿಗೆ ಸೇರುವುದು.

ಉಚ್ಚಂಗಿದುರ್ಗದ ಹಾಲಮ್ಮ ನಗುಡಿ ಮುಂದಿರುವ ಶಾಸನವೊಂದರಲ್ಲಿ[1] ಉಚ್ಚಂಗಿದುರ್ಗಕ್ಕೆ ಕೃತುಯುಗದಲ್ಲಿ ಮೇಘನಾದ, ತ್ರೆತಾಯುಗದಲ್ಲಿ ಕನಕಗಿರಿ, ದ್ವಾಪರಯುಗದಲ್ಲಿ ಉತ್ತುಂಗ ಪರ್ವತ, ಕಲಿಯುಗದಲ್ಲಿ ಉಚ್ಚಂಗಿ ಎಂಬ ಹೆಸರು ಬಂದಿರುವ ಉಲ್ಲೇಖವಿದೆ. ಉಚ್ಚಂಗಿ ಎಂಬಲ್ಲಿ ಕೊನೆಗೆ ಬರುವ 'ಗಿ'ಕಾರ ಹಚ್ಚಿಕೊಂಡು ಬರುವ ಗ್ರಾಮನಾಮಗಳು ಉತ್ತರ ಕರ್ನಾಟಕದಲ್ಲಿ ಅನೇಕ ಕಡೆ ದೊರೆಯುತ್ತವೆ. ನಿದರ್ಶನಕ್ಕಾಗಿ ಕೆಲವನ್ನು ನೀಡಲಾಗದೆ. ಗೊಣಸಗಿ, ತೆಲಗಿ, ಉತ್ತಂಗಿ, ಹುಣಸಗಿ, ಮೆಣಸಗಿ, ಅಸಂಗಿ, ಇತ್ಯಾದಿ 'ಗಿ' ಗಾರ ಗ್ರಾಮ ಹೃಸ್ವರೂಪ ಕೆಯ್ > ಗೆಯ್, ಕೆಯ್, ಹೊಲ - ಸ್ಥಳದ ಅರ್ಥವನ್ನು ನೀಡುತ್ತದೆ. ಗ್ರಾಮದ ಚರಿತೆಗೆ ಭಾಷಿಕ ಅಧ್ಯಯನ ಒಂದು ಮುಖ್ಯ ಆಕರವಾಗಿದೆ. ಜಗಳೂರಿನ ತಾಲ್ಲೂಕಿನ ಹುಚ್ಚಂಗಿಪುರ, ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ತಾಲ್ಲೂಕಿನಲ್ಲಿ ಉಚ್ಚಂಗೇರಿ ಇದೆ. ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನಲ್ಲಿ ಉಚಗೇರಿ ಎಂಬ ಊರುಗಳಿವೆ.

ಉಚ್ಚ - ಎತ್ತರ, ಶ್ರೇಷ್ಠ, ಉಚ್‌ಶೃಂಗಿ - ಉಚ್ಚಶೃಂಗಿ, ಉಚ್ - ಎತ್ತರವಾದ ಶೃಂಗ - ಕೋಡು, ಶಿಖರ ಎಂದಾಗಿರಬೇಕು. ಉಚ್ಚಶೃಂಗಿ ಉಚ್ಚಂಗಿಯಾಗಿ ಈ ರೂಪ ಪಡೆದುಕೊಂಡಿರಬಹುದಾಗಿದೆ. ಇದು ಸಂಸ್ಕೃತ ಪದವಾದರೂ ಸಧ್ಯಕ್ಕೆ ಈ ಮೂಲವನ್ನು ಒಪ್ಪಲಾಗಿದೆ.

ಈ ಪ್ರದೇಶದ ರಾಜಕೀಯ ಇತಿಹಾಸವನ್ನು ಅವಲೋಕಿಸಿದರೆ ಮಧ್ಯಕಾಲೀನ ಚರಿತ್ರೆಯಲ್ಲಿ ವಿಜಯನಗರ ಸಾಮ್ರಾಜ್ಯದ ಅವಧಿ ನಿರ್ಣಾಯಕ ಕಾಲಘಟ್ಟವಾಗಿದೆ ಎನ್ನಬಹುದು. ಈ ಕುರಿತು ಪ್ರಾದೇಶಿಕ ಸಂಶೋಧನೆಗಳು ಸಾಕಷ್ಟು ನಡೆದಿದ್ದು ಹೊಸ ಸಂಗತಿಗಳು ಬೆಳಕಿಗೆ ಬಂದಿವೆ. ವಿಜಯನಗರಕ್ಕಿಂತ ಮೊದಲು ಉಚ್ಚಂಗಿದುರ್ಗವು ಬನವಾಸಿ ಕದಂಬರಿಗೆ, ಕಲ್ಯಾಣ ಚಾಳುಕ್ಯರಿಗೆ, ನೊಳಂಬರಿಗೆ, ಪಾಂಡ್ಯರಿಗೆ, ಹೊಯ್ಸಳರಿಗೆ ಪ್ರಮುಖ ಕೇಂದ್ರವಾಗಿತ್ತು. ಅಲ್ಲದೆ ಬಳ್ಳಾರಿ, ದಾವಣಗೇರಿ, ಚಿತ್ರದುರ್ಗ, ಧಾರವಾಡ ಮತ್ತು ಕರ್ನಾಟಕದ

ದಕ್ಷಿಣ ಭಾಗದ ಕೆಲವು ಪ್ರದೇಶಗಳನ್ನೊಳಗೊಂಡ ನೊಳಂಬವಾಡಿ ೩೨೦೦೦ಕ್ಕೆ ಉಚ್ಚಂಗಿದುರ್ಗವು ರಾಜಧಾನಿಯಾಗಿತ್ತು. ಆಗ ಪಾಂಡ್ಯರು ಇಲ್ಲಿ ರಾಜ್ಯವಾಳುತ್ತಿದ್ದರು. ವಿಜಯನಗರದ ನಂತರ ಉಚ್ಚಂಗಿದುರ್ಗ ಪಾಳೆಯಗಾರರ ಪ್ರಮುಖ ನೆಲೆಯಾಗಿದ್ದಿತು. ಒಂದು ಕಾಲಕ್ಕೆ ರಾಜಕೀಯ ಶಕ್ತಿ ಕೇಂದ್ರವಾಗಿದ್ದ ಉಚ್ಚಂಗಿದುರ್ಗವು ಸಾಂಸ್ಕೃತಿಕ ಹಾಗೂ ಧಾರ್ಮಿಕ ಕೇಂದ್ರವಾಗಿ ಬೆಳೆಯುತ್ತಿರುವ ಕಾರಣ ಇದರ ರಾಜಕೀಯ ಚರಿತ್ರೆ ಮಸುಕಾಗುತ್ತದೆ. ಈ ಹಿನ್ನೆಲೆಯಲ್ಲಿ ಇದರ ರಾಜಕೀಯ ಇತಿಹಾಸದೊಂದಿಗೆ ಇಲ್ಲಿಯ ರಕ್ಷಣಾ ಸ್ಮಾರಕಗಳಾದ ಕೋಟೆ ಕೊತ್ತಳಗಳ ಬಗ್ಗೆ ಅಧ್ಯಯನ ಮಾಡುವುದು ಇಲ್ಲಿ ಪ್ರಮುಖವೆನಿಸುತ್ತದೆ.

ಮನುಷ್ಯ ಜೀವನದ ಅವಶ್ಯಕತೆಗಳಾದ ಹಿತಕರವಾದ ವಾಯುಗುಣ, ಫಲವತ್ತಾದ ಭೂ ಪ್ರದೇಶ, ಜಲಸಮೃದ್ಧಿ ಈ ಅನುಕೂಲಗಳು ಇವುಗಳ ಜೊತೆಗೆ ವಾಸಿಸಲು ಗಿರಿ ಕಂದರಗಳು ಉಚ್ಚಂಗಿದುರ್ಗದಲ್ಲಿ ಇರುವುದರಿಂದ ಈ ಪ್ರದೇಶದಲ್ಲಿ ಅತೀ ಪ್ರಾಚೀನ ಕಾಲದಿಂದಲೂ ಜನರು ನೆಲೆಸಿರುವುದಕ್ಕೆ ಕುರುಹುಗಳಿವೆ.

ಶಾತವಾಹನ ಸಾಮಂತರಾದ ಕಂಚಿಯ ಪಲ್ಲವರು ಸ್ವಲ್ಪಕಾಲ ಇಲ್ಲಿ ಆಳ್ವಿಕೆ ಮಾಡಿದ್ದಾರೆ.[2] ಉಚ್ಚಂಗಿದುರ್ಗಕ್ಕೆ ಸಂಬಂಧಿಸಿದಂತೆ ಪಲ್ಲವರ ಯಾವ ಕುರುಹುಗಳೂ ದೊರಕುವುದಿಲ್ಲ. ಆದರೆ ಕೈಫಿಯತ್ತುಗಳು ಮತ್ತು ಕೆಲವು ದಾಖಲೆಗಳಲ್ಲಿ ಈ ಕೋಟೆಯ ಬಗ್ಗೆ ಕೆಲವು ಮಾಹಿತಿಗಳಿವೆ. ಕಂಚಿಯ ಪಲ್ಲವರು ಮಧುರೆಯ ಅರಸರು ಒಂದಾಗಿ ಪ್ರಬಲತರ ಗಿರಿದುರ್ಗವೆಂದು ಹೆಸರಾಗಿದ್ದ ಉಚ್ಚಂಗಿದುರ್ಗವನ್ನು ತಮ್ಮ ಸೈನ್ಯದೊಡನೆ ಮುತ್ತಿಗೆ ಹಾಕಿದರು.[3] ಸಂಗ್ರಾಮವಾದ ನಂತರ ದುರ್ಗವು ಶತ್ರುಗಳ ವಶವಾಯಿತು. ಆದರೂ ರಾಜ್ಯ ಲೋಲಪರವಾದ ಕಾಂಚಿಯ ರಾಜರು ಮತ್ತು ಮಧುರೆಯ ಅರಸರು ತಮ್ಮಲ್ಲಿಯೇ ಸಂಧಾನ ಮಾಡಿಕೊಂಡು ದುರ್ಗದ ಕೋಟೆಯನ್ನು ವಶಪಡಿಸಿಕೊಂಡು ನೀರಾವರಿ ಯೋಜನೆಳಿಂದದ ವೃದ್ಧಿ ಮಾಡಿ[4] ಉಭಯತ್ರಯರು ಸೇರಿ ಒಂದು ಕೆರೆಯನ್ನು ನಿರ್ಮಿಸಿದರು. ಅದಕ್ಕೆ ಮೂರು ಕಡೆ ಕಟ್ಟೆಯನ್ನು ಕಾಂಚಿ ಮತ್ತು ಮಧುರೆಯ ಪಲ್ಲವರು ಕಟ್ಟಿಸಿದರು. ಕಾಂಚಿಯವರು ಗುಡ್ಡದ ಕೆಳಭಾಗದಲ್ಲಿ ಕೋಟೆಯನ್ನು ನಿರ್ಮಿಸಿ ಇಲ್ಲಿ ಹನುಮಂತನನ್ನು ಪ್ರತಿಷ್ಠಾಪಿಸಿದರು ಎಂಬ ಪ್ರತೀತಿ ಇದೆ. ಉಚ್ಚಂಗಿದುರ್ಗದ ವಾಯುವ್ಯಕ್ಕೆ ೨ ಮೈಲು ದೂರದಲ್ಲಿ ಕಂಚಿ ಪಲ್ಲವರ, ಮಧುರೆಯರ ಸೈನ್ಯ ಬಿಡಾರ ಮಾಡಿ ಜಯ ಸಂಪಾದಿಸಿತು.[5] ಕದಂಬ ವಂಶದ ಉಚ್ಚಂಗಿ ದೊರೆಗಳು ಸಿಂಹ ವಿಷ್ಣುವಿನ ವಂಶದ ಪಲ್ಲವರಿಂದ ನೆರವು ಪಡೆದರು. ಉಚ್ಚಂಗಿ ವಿಷ್ಣುಶರ್ಮ ಕದಂಬನಿಗೆ ಶಾಂತಿವರ್ಮ ಪಲ್ಲವನು ಪಟ್ಟ ಕಟ್ಟಿದ್ದು ವಿಷ್ಣುವರ್ಧನ ಮಗನಾದ ಸಿಂಹವರ್ಮನಿಗೂ ಪಲ್ಲವರು ನೆರವು ನೀಡಿದರು. ನಂತರ ಕಾಡುವೆಟ್ಟಿಯನ್ನು ಚಾಳುಕ್ಯರು ಸೋಲಿಸಿದರು.[6]

ಬನವಾಸಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳಿದ ಕದಂಬರು ಕ್ರಿ.ಶ. ೪ನೆಯ ಶತಮಾನದಿಂದ ೬ನೆಯ ಶತಮಾನದವರೆಗೆ ಆಳಿದುದನ್ನು ಚರಿತ್ರೆಯಿಂದ ತಿಳಿಯಬಹುದು.[7] ಮಯೂರವರ್ಮನಿಂದ ಕ್ರಿ.ಶ. ೩೪೫ರಲ್ಲಿ ಕದಂಬವಂಶ ಆರಂಭವಾಯಿತು.[8] ಕದಂಬವಂಶದ ದೊರೆಗಳೆಂದರೆ ಕೊಂಗವರ್ಮ, ಭಗೀರಥವರ್ಮ, ರಘುವರ್ಮ, ಕಾಕುತ್ಸವರ್ಮ, ಶಾಂತಿವರ್ಮ,ಕುಮಾರವರ್ಮ, ಮೊದಲನೆ ಕೃಷ್ಣ, ಮೃಗೇಶವರ್ಮ, ಮುಂತಾದವರು. ಮುಂದೆ ಕಾಕುತ್ಸವರ್ಮನಿಗೆ ಕುಮಾರವರ್ಮ (ಮಂಧಾತ) ಮತ್ತು ಕೃಷ್ಣವರ್ಮ ಎಂಬ ಎರಡು ಮಕ್ಕಳಾಗಿ ಉಚ್ಚಂಗಿಯ ಅಧಿಪತಿಯಾದ ಕೃಷ್ಣ ವರ್ಮನು ತನ್ನ ಹಿರಿಯಣ್ಣನ ಮಗ ಮೃಗೇಶನಿಗೆ ವಿರುದ್ಧವಾಗಿ ಪಲ್ಲವರ ಬೆಂಬಲ ಪಡೆದರು. ಹೀಗೆ ಕದಂಬರ ರಾಜ್ಯವು ಇಬ್ಭಾಗವಾಯಿತು.[9] ಒಂದು ಭಾಗವು ತಲಕಾಡಿನ ಗಂಗರ ಬೆಂಬಲ ಪಡೆದು ಬನವಾಸಿ ಶಾಖೆ ಆರಂಭಿಸಿತು.[10] ಮತ್ತೊಂದು ಪಲ್ಲವರ ಹಾಗೂ ಪಾರವಿ ಗಂಗರ ಬೆಂಬಲ ಪಡೆದು ಉಚ್ಚಂಗಿ ಶಾಖೆ ಆರಂಭಿಸಿ ಇವರು ಸುಮಾರು ೧೧೭ ವರ್ಷಗಳವರೆಗೆ ಆಳ್ವಿಕೆ ಮಾಡಿದರು.[11]

ಗಂಗರು ಮತ್ತು ರಾಷ್ಟ್ರಕೂಟರ ಕುರುಹುಗಳು ಇಲ್ಲಿ ಅಲಭ್ಯ. ನೊಳಂಬ ಪಲ್ಲವರು ಪಲ್ಲವ ವಂಶದ ಕಿರುಶಾಖೆಗೆ ಸೇರಿದವನು. ಸುಮಾರು ಕ್ರಿ.ಶ. ೭೦೦ರಲ್ಲಿ ಈ ಶಾಖೆ ಆರಂಭವಾಗಿ ಕೊನೆಗೆ ಹೊಯ್ಸಳ ಹಾಗೂ ಕಲ್ಯಾಣ ಚಾಳುಕ್ಯರಲ್ಲಿ ಐಕ್ಯವಾಯಿತೆಂದು ತಿಳಿದುಬರುತ್ತದೆ.[12] ಕ್ರಿ.ಶ. ೧೦ನೆಯ ಶತಮಾನದಲ್ಲಿ ಇವರ ಆಡಳಿತ ಪ್ರದೇಶವು ನೊಳಂಬವಾಡಿ ೩೨೦೦೦ದ ಪ್ರಾಂತವಾಯಿತು. ಹಾಗಾಗಿ ನೊಳಂಬರಿಗೆ ೩೨೦೦೦ಕ್ಕೆ ಬಳ್ಳಾರಿ, ಕೋಲಾರ, ಬೆಂಗಳೂರು ಜಿಲ್ಲೆಯ ಕೆಲವು ಭಾಗಗಳು ಸೇರಿಕೊಂಡವು. ಈ ವಂಶದ

ಸ್ಥಾಪಕ ತ್ರಿನಯನ ಪಲ್ಲವ. ಆಗ ಉಚ್ಚಂಗಿದುರ್ಗವು ನೊಳಂಬರ ಆಡಳಿತಕ್ಕೆ ಒಳಗಾದ ಪ್ರದೇಶವಾಗಿದೆ. ಇದೇ ಸಮಯದಲ್ಲಿ ನೊಳಂಬರು ತಮ್ಮ ನಿಷ್ಠೆಯನ್ನು ಕಲ್ಯಾಣ ಚಾಳುಕ್ಯರಿಗೆ ವರ್ಗಾಯಿಸಿದಂತೆ ಕಂಡುಬರುತ್ತದೆ.[13] ಉಚ್ಚಂಗಿ ೩೦ ಇದೊಂದು ಪ್ರಮುಖ ಆಡಳಿತ ನೆಲೆಯಾಗಿ ಇವರಿಗೆ ರಾಜಧಾನಿಯಾಯಿತು.[14] ಪಾಂಡ್ಯರು ಈ ಸಂಪ್ರದಾಯವನ್ನು ಮುಂದುವರೆಸಿದರು.

ಪಾಂಡ್ಯರು ಸುಮಾರು ಕ್ರಿ.ಶ. ೧೧ನೇ ಶತಮಾನದಿಂದ ೧೩ನೇ ಶತಮಾನದ ಆರಂಭದವರೆಗೆ ಸುಮಾರು ೧೨ ಜನಪಾಂಡ್ಯ ಅರಸರು ಉಚ್ಚಂಗಿದುರ್ಗವನ್ನು ರಾಜಧಾನಿ ಮಾಡಿಕೊಂಡು ಇಲ್ಲಿ ಆಳ್ವಿಕೆ ಮಾಡಿದರು.[15] ಆ ಸಮಯದಲ್ಲಿ ಉಚ್ಚಂಗಿದುರ್ಗದ ಮೇಲಿರುವ ತೈಲೇಶ್ವರ ದೇವರಿಗೆ ನೊಳಂಬ ಪಲ್ಲವ ಪೆರ್ಮಾಡಿ ದೇವನು ಗಂಟಿಗನ ಕೆರೆಯನ್ನು ದಾನಬಿಟ್ಟಂತೆ ಕ್ರಿ.ಶ. ೧೧೭೦ ರ ಶಾಸನ ತಿಳಿಸುತ್ತದೆ.[16] ಕ್ರಿ.ಶ. ೧೧೯೫ರ ಶಾಸನವು[17] ವಿಜಯ ಪಾಂಡ್ಯದೇವನು ಉಚ್ಚಂಗಿ ಪಟ್ಟಣದ ತೆರಿಗೆಯನ್ನು ದೇವರಿಗೆ ದತ್ತಿ ಬಿಟ್ಟಂತೆ ತಿಳಿಸುತ್ತದೆ.

ಕ್ರಿ.ಶ. ೧೧೦೦ ಶಾಸನವೊಂದು[18] ತ್ರಿಭುವನಮಲ್ಲ ಪಾಂಡ್ಯದೇವನು ಉಚ್ಚಂಗಿ ದೇವಿಗೆ ದತ್ತಿ ನೀಡಿದ ವಿವರ ನೀಡುತ್ತದೆ. ಕ್ರಿ.ಶ. ೧೦೯೪ ರ ಶಾಸನವು ವಿಜಯಾದಿತ್ಯದೇವನು ಆಡಳಿತ ಅವಧಿಯಲ್ಲಿ ಸೂಳೆಮಾಳ ಮಾರಮಯ್ಯನ ಮಾರೇಶ್ವರ ದೇವರಿಗೆ ಗದ್ದೆ, ತೋಟ ದಾನಬಿಟ್ಟಂತೆ ತಿಳಿಸುತ್ತದೆ.[19] ಹೀಗೆ ಉಚ್ಚಂಗಿದುರ್ಗದಲ್ಲಿ ಪಾಂಡ್ಯ ಅರಸರು ದೇವಸ್ಥಾನಗಳಿಗೆ ದಾನ ದತ್ತಿಗಳನ್ನು ನೀಡುವುದರೊಂದಿಗೆ ವೈಭವ ಆಳ್ವಿಕೆ ಮಾಡಿದರು. ಇವರು ಯುದ್ಧ ನಿಪುಣರು, ಶೂರರು ಆಗಿದ್ದರು. ಪಾಂಡ್ಯರಲ್ಲಿ ವಿಜಯಪಾಂಡ್ಯದೇವರು ಅತ್ಯಂತ ಪರಾಕ್ರಮದ ದೊರೆಯಾಗಿದ್ದನು. ಇವನ ಬಗ್ಗೆ ಶಾಸನವೊಂದರಲ್ಲಿ

*ಚಿಂತಾಃತಃ ಕರಣಂ ಯಾಧವಾಭರಣಂ ಪಾಂಡ್ಯ ಕುಳಕಮಳ ಮಾರ್ತಂಡಂ*
*ಪರಿಚ್ಛೇದಗಂಡಂ ರಾಜಿಗ ಚೋಳ ಮನೋಭಂಗಂ ಸಾಹಸೋತ್ತುಂಗಂ*
*ನಿಖಿಳ ನಾಮಾವಳೀ ವಿರಾಜಿತಮಪ್ಪ ಶ್ರೀ ಮನ್ಮಹಾಮಂಡಳೇಶ್ವರ*

ವಿಜಯಪಾಂಡ್ಯದೇವರು ಎಂದಿದೆ.[20] ಅಂದರೆ ವಿಜಯ ಪಾಂಡ್ಯನು ಚೋಳರನ್ನು ಗೆದ್ದ ಬಗೆಯನ್ನು ವರ್ಣಿಸಿದೆ. ಹೊಯ್ಸಳರ ೩ನೇ ಬಲ್ಲಾಳನು ಕ್ರಿ.ಶ. ೧೧೭೭ ರಲ್ಲಿ ಪ್ರಯಾಸ ಮಾನವಾಗಿ ಉಚ್ಚಂಗಿದುರ್ಗವನ್ನು ವಿಜಯಪಾಂಡ್ಯನನ್ನು ಸೋಲಿಸುವುದರೊಂದಿಗೆ ಹೊಯ್ಸಳರು ವಶಪಡಿಸಿಕೊಂಡರು.[21] ಮುಂದೆ ಕಾಲಾಂತರದಲ್ಲಿ ಉಚ್ಚಂಗಿದುರ್ಗವು ಹೊಯ್ಸಳರಿಗೆ ಸೇರಿದ್ದು ಕಂಡುಬರುತ್ತದೆ. ಚಾಳುಕ್ಯರ ಪತನದ ಹಾದಿ ಮತ್ತು ಚಾಳುಕ್ಯರ ರಾಜ್ಯದಲ್ಲಿ ಹೊಯ್ಸಳರ ಪ್ರವೇಶವು ಪ್ರಮುಖವಾದ ಹಂತವಾಗಿದ್ದರಿಂದ ಹೊಯ್ಸಳರಿಗೆ ಉಚ್ಚಂಗಿದುರ್ಗವನ್ನು ವಶಪಡಿಸಿಕೊಂಡಿದ್ದು ಒಂದು ಪ್ರತಿಷ್ಠೆಯ ಸಂಗತಿಯು ಆಗಿರಬಹುದಾಗಿದೆ.

ಚೋಳರು ಮತ್ತು ಚಾಳುಕ್ಯರು ನಡುವೆ ಈ ಭಾಗದಲ್ಲಿ ಸದಾ ಯುದ್ಧಗಳು ಜರುಗುತ್ತಿದ್ದವು. ಇಂತಹ ಸನ್ನಿವೇಶದಲ್ಲಿ ಹೊಯ್ಸಳರು ಬೆಳಕಿಗೆ ಬಂದರು. ಒಂದನೇ ಬಲ್ಲಾಳ, ಎರಡನೇ ಬಲ್ಲಾಳ, ಮೂರನೇ ಬಲ್ಲಾಳ, ಒಂದನೇ ನರಸಿಂಹ, ಸೋಮೇಶ್ವರ ಎರಡನೇ ನರಸಿಂಹ ಮತ್ತು ಮೂರನೇ ನರಸಿಂಹ ಹೊಯ್ಸಳ ದೊರೆಗಳಲ್ಲಿ ಪ್ರಮುಖರು. ಇವರು ಕ್ರಿ.ಶ.೧೦ನೇ ಶತಮಾನದಿಂದ ೧೪ನೇ ಶತಮಾನದ ಮಧ್ಯಭಾಗದವರೆಗೆ ಅಂದರೆ ೩ ಶತಕಗಳ ಕಾಲ ಇಲ್ಲಿ ಆಳ್ವಿಕೆ ಮಾಡಿದರು. ಕ್ರಿ.ಶ. ೧೧೧೭ಲ್ಲಿ ಚಾಳುಕ್ಯರು ಸಾಮಂತರಾಗಿದ್ದ ಉಚ್ಚಂಗಿಯ ಪಾಂಡ್ಯರನ್ನು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕು ದುಮ್ಮಿ ಎಂಬ ಸ್ಥಳದಲ್ಲಿ ಸೋಲಿಸಿದರು.[22] ಉಚ್ಚಂಗಿದುರ್ಗವು ಹೊಯ್ಸಳರ ಕ್ಷೀಣಾವಸ್ಥೆಯ ನಂತರ ವಿಜಯನಗರದ ಆಡಳಿತಕ್ಕೆ ಒಳಪಟ್ಟಿತ್ತು. ಆಗಲೇ ವಿಜಯನಗರಕ್ಕೆ ಸಹಾಯಕವಾದ ಕಾವ್ಯವೊಂದು ಬಾಗಳಿಯಲ್ಲಿ ಉದಯಿಸಿತು. ವಿಜಯನಗರದ ಪತನಾನಂತರ ಪಾಳೆಯಗಾರ ದಾದನಾಯಕ ಸ್ವತಂತ್ರ ರಾಜನಾದ. ಕ್ರಮೇಣ ಹರಪನಹಳ್ಳಿಯಲ್ಲಿ ಕೋಟೆ ಕಟ್ಟಿಕೊಂಡು ರಾಜ್ಯ ವಿಸ್ತರಿಸಿದ. ಚಿತ್ರದುರ್ಗ ಅರಸರಿಗೆ ಯುದ್ಧದಲ್ಲಿ ಸಹಾಯ ಮಾಡಿದ್ದರಿಂದ ಉಚ್ಚಂಗಿದುರ್ಗವು ಹರಪನಹಳ್ಳಿ ಪಾಳೆಯಗಾರರಾದ ದಾದನಾಯಕನಿಗೆ ದೊರಕಿತು.[23] ಉಚ್ಚಂಗಿದುರ್ಗ ಭದ್ರ ಹಾಗೂ ವ್ಯವಸ್ಥಿತ ಆಯಕಟ್ಟು ಪ್ರದೇಶವಾದ್ದರಿಂದ ತಮ್ಮ ರಾಜಧಾನಿಯನ್ನು ಹರಪನಹಳ್ಳಿಯಿಂದ ಉಚ್ಚಂಗಿದುರ್ಗಕ್ಕೆ ವರ್ಗಾಯಿಸಿ ದಾದನಾಯಕ ಇಲ್ಲಿ ಆಳ್ವಿಕೆ ಮಾಡಿದ. ಮುಂದೆ ರಂಗಣ್ಣ ನಾಯಕ, ಭರಮಣ್ಣ

ನಾಯಕ, ಬಸವಂತ ನಾಯಕ, ಹರಿಯಾಮ್ಮಾಜಿ, ಮುಮ್ಮಡಿ ಬಸಪ್ಪ ನಾಯಕ, ಸೋಮಶೇಖರ ನಾಯಕ ಇವರು ಆಳ್ವಿಕೆ ಮಾಡಿದರು. ಇದರ ಕಾಲದಲ್ಲಿ ಉಚ್ಚಂಗಿದುರ್ಗದ ಕೋಟೆಯ ಜೀರ್ಣೋದ್ಧಾರ ಕಾರ್ಯವು ನಡೆಯಿತು. ನಂತರ ಉಚ್ಚಂಗಿದುರ್ಗ ಟಿಪ್ಪುಸುಲ್ತಾನ ಮತ್ತು ಬ್ರಿಟೀಷರ ಆಳ್ವಿಕೆಗೆ ಒಳಪಟ್ಟಿತ್ತು.

**ಕೋಟೆಯ ನಿರ್ಮಾಣದ ಕಾಲ**

ಪ್ರಾಚೀನ ಕಾಲದ ದೇವಾಲಯ ಮತ್ತು ಕೋಟೆಯ ಕಾಲವನ್ನು ನಿರ್ಣಹಿಸುವುದು ಕಠಿಣವಾದದು. ಆಧಾರಗಲ ಕೊರತೆಯೇ ಇದಕ್ಕೆ ಕಾರಣ. ಬನವಾಸಿ ಕದಂಬರ ಒಂದು ಶಾಖೆ ಉಚ್ಚಂಗಿಯಿಂದ ಆಳ್ವಿಕೆ ನಡೆಸಿತು.[24] ಆದರೆ ಅವರ ಕಾಲದಲ್ಲಿ ಇಲ್ಲಿ ಕೋಟೆ ಇದ್ದಿರಬಹುದಾದರೂ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಕದಂಬರ ಆಳ್ವಿಕೆಯ ನಂತರ ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ಬಾದಾಮಿಯ ಚಾಳುಕ್ಯರು ಮತ್ತು ರಾಷ್ಟ್ರಕೂಟರ ಕಾಲದ ಯಾವುದೇ ಶಾಸನಗಳಾಗಲೀ ಅವಶೇಷಗಳಾಗಲೀ ಇಲ್ಲಿ ಕಂಡುಬರುವುದಿಲ್ಲ. ಮುಂದೆ ಕಲ್ಯಾಣ ಚಾಳುಕ್ಯರ ಕಾಲದ ಶಾಸನಗಳಲ್ಲಿ ಅವಶೇಷಗಳಾಗಲೀ ಇಲ್ಲಿ ಕಂಡುಬರುವುದಿಲ್ಲ. ಮುಂದೆ ಕಲ್ಯಾಣ ಚಾಳುಕ್ಯರ ಕಾಲದ ಶಾಸನಗಳಲ್ಲಿ ಶಾಸನಗಳಲ್ಲಿ ಉಚ್ಚಂಗಿ ಕೋಟೆಯ ಬಗೆಗೆ ಉಲ್ಲೇಖಗಳಿವೆ.

ಶ್ರೀಮತ್ರಿಭುವನಮಲ್ಲ ಪಾಂಡ್ಯದೇವ ಪಾಧಾರಾದಕಂ ವೈರಿಬಳಸಾಧಕಂ ಸಮಾದಿ ಸಮಸ್ತ ಪ್ರಶಸ್ತಿ ಸಂಹಿತಂ ಮನ್ಮಹಾ ಸಾಮನ್ತಂ ಒಳನಾಡಳ್ವರು ಶ್ರೀ ಪಾಂಡ್ಯ ದೇವರ್ಗೆ ಭಿನ್ನಪಮ ಗೈಯ್ಯಲು ಅನಾದಿ ಸಂಸಿದ್ಧಿಯ ಪಟ್ಟಣಂ ಉಚ್ಚಂಗಿ ಕೋಟೆಯ[25] ಎಂದು ಒಂದು ಶಾಸನವು ಹೇಳಿದರೆ ಮತ್ತೊಂದು ಶಾಸನವು ಉಚ್ಚಂಗಿ ಕೋಟೆ ಉಲ್ಲೇಖವನ್ನು ಈ ರೀತಿ ವಿವರಿಸಿದೆ. ವೆಂಗೀಯ ಮಂಡಳೇಶ್ವರ ಶ್ರೀ ವಿಷ್ಣುವರ್ಧನ ವಿಜಯಾದಿತ್ಯ ದೇವರು ನೊಳಂಬವಾಡಿ ೩೨೦೦೦ವನ್ನು ಆಳುವಾಗ ಮಾರೇಶ್ವರ ದೇವರ್ಗೆ ಉಚ್ಚಂಗಿ ಕೋಟೆಯ ನೈರುತ್ಯ ದೆಸೆಯಂ.[26]

ಚಾಳುಕ್ಯ ಚೂಡಾಮಣಿಯೆಂದು ಕರೆಸಿಕೊಂಡ ರಾಜಾಧಿತ್ಯರು ಆಳುತ್ತಿದ್ದಾಗ ಗಂಗ ವಂಶದ ೨೧ನೇ ಮಾರಸಿಂಹನು ಕ್ರಿ.ಶ. ೯೭೧ರಲ್ಲಿ ಕೋಟೆಯನ್ನು ಮುತ್ತಿ ವಶಪಡಿಸಿಕೊಂಡನು.[27] ಉಚ್ಚಂಗಿದುರ್ಗದ ಕೋಟೆಯ ಈ ಮೇಲಿನ ಆಧಾರಗಳ ಹಿನ್ನೆಲೆಯಲ್ಲಿ ಕ್ರಿ.ಶ. ೯೭೧ ಕ್ಕಿಂತ ಮೊದಲೇ ನಿರ್ಮಾಣವಾಗಿರುವುದು ಕಂಡುಬರುತ್ತದೆ.

**ಕೋಟೆಯ ಲಕ್ಷಣಗಳು**

ಶತೃಗಳಿಂದ ರಕ್ಷಣೆಯನ್ನು ಪಡೆಯುವುದೇ ಕೋಟೆಗಳ ನಿರ್ಮಾಣದ ಮೂಲ ಉದ್ದೇಶ. ಶತೃಗಳ ಹಾವಳಿ, ಅವಶ್ಯಕತೆಗಳ ಹೆಚ್ಚಳ ಮತ್ತು ರಾಜ್ಯವು ವಿಸ್ತಾರವಾಗುತ್ತಾ ಹೋದಂತೆ ಕೋಟೆಯ ಸುತ್ತುಗಳು ಬೆಳೆದಿವೆ. ಆಡಳಿತದ ಪ್ರಮುಖ ಕೇಂದ್ರವಾಗಿದ್ದ ಉಚ್ಚಂಗಿ ಕೋಟೆಯು ಹಲವು ಬಾರಿ ದುರಸ್ತಿಯೊಂದಿಗೆ, ಹೊಸ ಸುತ್ತುಗಳನ್ನು ಹೊಂದಿದೆ. ಪಾಳೆಯಗಾರರ ಅವಧಿಯಲ್ಲಿ ದಾದಯ್ಯ ನಾಯಕನು ಉಚ್ಚಂಗಿದುರ್ಗದ ಕೋಟೆಯನ್ನು ಬಲಪಡಿಸಿಕೊಂಡು ಪ್ರಬಲವಾಗಿದ್ದನು.[28] ಸ್ಥಳೀಯರು ಇದು ಏಳು ಸುತ್ತಿನ ಕೋಟೆ ಎಂದು ಅಭಿಪ್ರಾಯ ಪಟ್ಟರೆ ಡಾ. ಸಿ.ಎಸ್. ಪಾಟೀಲರ ರೀತ್ಯಾ ಇದು ಹಲವು ಸುತ್ತುಗಳನ್ನು ಒಳಗೊಂಡಿತ್ತು.[29] ಎಂದಿದ್ದಾರೆ. ಕದಂಬರಿಂದ ಮೊದಲುನುಡಿ ವಿಜಯನಗರದ ಅರಸರವರೆಗೆ ಕೋಟೆಯನ್ನು ಭದ್ರಪಡಿಸಿಕೊಂಡಿರುವುದಕ್ಕೆ ಆಧಾರಗಳು ಲಭ್ಯವಾಗಿಲ್ಲ. ಉಚ್ಚಂಗಿ ಕೋಟೆಯು ವಿಸ್ತಾರವಾಗಿದ್ದು ಹಲವು ಸುತ್ತುಗಳನ್ನು ಒಳಗೊಂಡಿರಬಹುದಾದುದಕ್ಕೆ ಈ ಕೆಳಗಿನ ಅಂಶಗಳು ಗಮನಾರ್ಹ.

ಒಂದನೆಯದಾಗಿ ಜನಸಾಮಾನ್ಯರಿಗೆ ಕೋಟೆಯ ಪಕ್ಕದಲ್ಲಿ ಊರುಗಳು ನಿರ್ಮಾಣವಾಗುತ್ತಿದ್ದವು. ರಾಜಸಂತತಿ ಮತ್ತು ಪ್ರಮುಖ ವರ್ಗದವರು ಕೋಟೆಯೊಳಗಿರುತ್ತಿದ್ದರು. ಉಚ್ಚಂಗಿದುರ್ಗದ ಆಗ್ನೇಯ ಭಾಗಕ್ಕೆ ಊರಿದ್ದಿರಬಹುದು. ಅದರ ಅವಶೇಷಗಳು ಇಂದಿಗೂ ಇದ್ದು, ಪಕ್ಕದಲ್ಲಿ ಗೋಡೆಗಳಿರುವುದರಿಂದ ಹೊರ ಕೋಟೆಯ ವಿಸ್ತಾರ ಈಗಿರುವುದಕ್ಕಿಂತಲೂ ದೊಡ್ಡದಾಗಿತ್ತು. ಕೋಟೆಯ ಒಳಗೆ

ಪ್ರವೇಶಿಸಲು ಮೂರು ಬಾಗಿಲುಗಳನ್ನು ದಾಟಬೇಕಾಗಿದ್ದು ಕ್ಷೇತ್ರ ವೀಕ್ಷಣೆಯ ಅವಧಿಯಲ್ಲಿ ಗಮನಿಸಿದಂತೆ ಉಚ್ಚಂಗಿ ಕೋಟೆಯು ಸಧ್ಯದಲ್ಲಿ ಹರಿದ, ಮುರುಕಲಾದ ಮೂರು ಸುತ್ತುಗಳನ್ನು ಒಳಗೊಂಡಿದ್ದು ಈ ಸುತ್ತುಗಳು ದಕ್ಷಿಣಭಾಗಕ್ಕೆ ವಿಸ್ತರಿಸಿವೆ.

ದಕ್ಷಿಣೋತ್ತರವಾಗಿ ಹಬ್ಬಿರುವ ಎರಡು ಬೆಟ್ಟಗಳನ್ನು ಬಳಸಿ ಹೊರಕೋಟೆಯನ್ನು ಕಟ್ಟಿದ್ದು, ಇದೊಂದು ಗಿರಿದುರ್ಗವಾಗಿದೆ. ಇದನ್ನು ತಳಪಾಯದ ಆಧಾರವಿಲ್ಲದೆ ಹಾಸು ಬಂಡೆಯ ಮೇಲೆ ನಿರ್ಮಿಸಿದಂತಿದೆ. ಬೆಟ್ಟದ ತುದಿಯನ್ನು ತಲುಪಲು ಶತೃಗಳಿಗೆ ಸಾಧ್ಯವಾಗದಂತೆ ಕೋಟೆ ಭದ್ರವಾಗಿದೆ. ಕೋಟೆಯ ಗೋಡೆಯು ೧೦ ಅಡಿ ಎತ್ತರವಾಗಿದ್ದು ಕೆಲವು ಭಾಗದಲ್ಲಿ ಹೆಚ್ಚು ಕಡಿಮೆ ಇದೆ. ಇದರ ಅಗಲ ಸುಮಾರು ೫ ಅಡಿಗಳಾಗಿದ್ದು ಕೆಲವು ಸ್ಥಳಗಳಲ್ಲಿ ೧೦ ಅಡಿಯವರೆಗೂ ಇದೆ. ಕೋಟೆ ಗೋಡೆಯ ಕೆಳಭಾಗದಲ್ಲಿ ಆಯತಾಕಾರದ ಕಲ್ಲುಗಳನ್ನು ಬಳಸಿದ್ದು ಮೇಲ್ಭಾಗದಲ್ಲಿ ಮಧ್ಯಮ ಗಾತ್ರದ ಕಲ್ಲುಗಳ ಬಳಕೆಯಾಗಿದೆ. ಸೂಕ್ಷ್ಮವಾಗಿ ಇದನ್ನು ಅವಲೋಕಿಸಿದರೆ ಮೂರು ವಿವಿಧ ಹಂತಗಳನ್ನು ಗುರುತಿಸಬಹುದು ಮತ್ತು ಮೇಲ್ಭಾಗದ ಗೋಡೆಯಲ್ಲಿ ಗಾರೆಯ ಉಪಯೋಗವಿದ್ದು ಬಂದೂಕನ್ನು ಬಳಸಲು ಕಿಂಡಿಗಳನ್ನು ಅಳವಡಿಸಲಾಗಿದೆ. ಕೋಟೆಯ ಆಯಕಟ್ಟಿನ ಸ್ಥಳಗಳಲ್ಲಿ (ಬತೇರಿ)ಕೊತ್ತಳಗಳಿದ್ದು, ಅವು ೧೨೦ಕ್ಕೂ ಹೆಚ್ಚಿವೆಯೆಂದು ಊರಿನವರು ಅಭಿಪ್ರಾಯಪಟ್ಟರೂ, ಪ್ರಸ್ತುತ ಸುಮಾರು ೩೦ ಕೊತ್ತಳಗಳು ಮಾತ್ರ ಗೋಚರಿಸುತ್ತವೆ. ಇವುಗಳನ್ನು ಶಸ್ತ್ರಗಳ ಸಹಿತ ಮೇಲೇರಲು ಅನುಕೂಲವಾಗದಂತೆ ಚೌಕಾಕಾರ ಮತ್ತು ವರ್ತುಲಾಕಾರದಲ್ಲಿ ನಿರ್ಮಿಸಲಾಗಿದೆ.

ಶತೃಗಳ ಬರುವಿಕೆಯನ್ನು ಗ್ರಹಿಸುವುದು ಮತ್ತು ಕೋಟೆಯ ರಕ್ಷಣೆ ಮಾಡಿಕೊಳ್ಳುವುದು ಇವುಗಳ ನಿರ್ಮಾಣದ ಮೂಲ ಉದ್ದೇಶವಾಗಿದೆ. ಉಚ್ಚಂಗಿ ಕೋಟೆಗೆ ಆರು ಪ್ರಮುಖ ಬಾಗಿಲುಗಳಿದ್ದು, ದಿಡ್ಡಿ ಮತ್ತು ಉಪಬಾಗಿಲುಗಳೂ ಇವೆ. ಕೋಟೆಯ ಪೂರ್ವದಿಂದ ಒಳ ಪ್ರವೇಶಿಸಲು ಇರುವುದೇ ಮಳಿಬಾಗಿಲಾಗಿದ್ದು ದೂರದಿಂದ ಗೋಚರಿಸುವುದಿಲ್ಲ. ಇದರ ಬಾಗಿಲವಾಡದಲ್ಲಿ ಲಿಂಗವನ್ನು ಕೆತ್ತಿದ್ದು, ಅದಕ್ಕೆ ಎರಡು ಆನೆಗಳು ನೀರನ್ನು ಸುರಿಯುವ ದೃಶ್ಯವಿದೆ. ಇದರ ಪಾರ್ಶ್ವಗಳಲ್ಲಿ ಬೃಹದಾಕಾರದ ಗೋಡೆಗಳಿದ್ದು ಇದಕ್ಕೆ ೨೦ ಮೀಟರ್ ಅಂತರದಲ್ಲಿ ಎರಡನೇ ಬಾಗಿಲಿದೆ. ಇದು ಉತ್ತರಾಭಿಮುಖವಾಗಿರುವುದಲ್ಲದೆ ಇದರ ಮೇಲ್ಭಾಗದಲ್ಲಿ ಗಣೇಶನ ಶಿಲ್ಪವನ್ನು ಕೆತ್ತಲಾಗಿದ್ದು, ಪಾರ್ಶ್ವಗೋಡೆಯಲ್ಲಿ ದೊಡ್ಡಗಾತ್ರದ ತೆನೆಗಳನ್ನು ಕಾಣಬಹುದಾಗಿದೆ.

ಮೂರನೇ ಬಾಗಿಲು, ಎರಡು ಚೌಕಾಕಾರದ ಕೊತ್ತಳಗಳ ಮಧ್ಯದಲ್ಲಿದ್ದು ಕಂಬಗಳ ಕಟ್ಟೆಯ ಮೇಲಿರುವುದು ಕಾಣುವುದು. ಇದರ ಎಡಬಲಕ್ಕೆ ಒಳಗೋಡೆಯಲ್ಲಿ ೧೨ನೇ ಶತಮಾನಕ್ಕೂ ಮೊದಲೇ ನಿರ್ಮಾಣಗೊಂಡಿರಬಹುದಾದ ಕಂಬಗಳ, ಶಿಲ್ಪಗಳ ಅವಶೇಷಗಳನ್ನು ಕಾಣಬಹುದಾಗಿದೆ. ನಾಲ್ಕನೆಯದು ಹರಿಹರದ ದಿಕ್ಕಿಗೆ ಮುಖವಾಗಿರುವುದರಿಂದ ಹರಿಹರ ಬಾಗಿಲೆಂದು ಕರೆಯಲ್ಪಟ್ಟಿದ್ದು ಇದು ವೈರಿಗಳಿಗೆ ಗೋಚರಿಸದಂತಿರಲು ಇಂಗ್ಲೀಷಿನ 'L' ಅಕ್ಷರದಾಕಾರದಲ್ಲಿ ಗೋಡೆಯನ್ನು ಕಟ್ಟಲಾಗಿದೆ. ಪಶ್ಚಿಮ ಭಾಗದಿಂದ ಉಚ್ಚಂಗಿ ಕೋಟೆಯನ್ನು ಪ್ರವೇಶಿಸಲು ಈ ಬಾಗಿಲನ್ನು ಬಿಟ್ಟರೆ ಬೇರೆ ಯಾವ ಮಾರ್ಗವೂ ಇಲ್ಲ. ಐದನೆಯ ತುಂಬಾ ಇಕ್ಕಟ್ಟಾದ ಬಾಗಿಲಾಗಿದ್ದು ೮ ಅಡಿ ಎತ್ತರವಾಗಿದೆ. ಈ ಬಾಗಿಲಿಗೆ ಇಂದಿಗೂ ಬಾಳೆಹಣ್ಣನ್ನು ತಿಕ್ಕುವ ಪದ್ಧತಿ ರೂಢಿಯಲ್ಲಿದೆ. ಮತ್ತು ಉಚ್ಚಂಗೆಮ್ಮ ದೇವಿ ಯ ದರ್ಶನಕ್ಕೆ ಈ ಮಾರ್ಗವನ್ನು ಬಳಸಲೇಬೇಕು. ಆರನೆಯದು ಮುಖ್ಯವಾದುದು ಈ ಬಾಗಿಲು ಎರಡು ಚೌಕಾಕಾರದ ಕೊತ್ತಳಗಳ ಮಧ್ಯದಲ್ಲಿದ್ದು ಬಾಗಿಲಿನ ಮೇಲೆ ಗಣೇಶನನ್ನು ಕೆತ್ತಲಾಗಿದೆ. ಇದು ಆರು ಅಂಕಣಗಳನ್ನು ಮತ್ತು ಪಾರ್ಶ್ವಗಳಲ್ಲಿ ಕಟ್ಟೆಗಳನ್ನು ಹೊಂದಿದೆ. ಬಾಗಿಲಿನ ಒಳ ಮೈಯನ್ನು ಕಮಾನಿನಿಂದ ಅಲಂಕರಿಸಲಾಗಿದ್ದು, ಕಮಾನಿನ ಕಲ್ಲುಗಳನ್ನು ಮುಂದೆ ಚಾಚಿ ಸ್ವಲ್ಪಭಾಗ ತುಂಡರಿಸಿದಂತಿದೆ.

ಮೂರನೇ ಬಾಗಿಲಿನ ದಕ್ಷಿಣದ ಗೋಡೆಯ ಪೂರ್ವಭಾಗಕ್ಕೆ ದಿಡ್ಡಿಯ ಬಾಗಿಲಿದ್ದು, ಇದು ಸುಮಾರು ೫ ಅಡಿ ಎತ್ತರ ೪ ಅಡಿ ಅಗಲವಾಗಿದ್ದು ಬೇರೆ ಬಾಗಿಲುಗಳಗಿಂತ ಭಿನ್ನವಾಗಿದೆ. ಇಲ್ಲಿಂದ ಕೋಟೆಯ ದಕ್ಷಿಣಭಾಗಕ್ಕೆ ಹೋಗಲು ಇದು ಹತ್ತಿರದ ಮಾರ್ಗವಾಗಿದೆ. ಇದು ಗುಪ್ತದ್ವಾರವೆಂತಲೂ ಸ್ಥಳೀಯರಿಂದ ಗುರುತಿಸಲ್ಪಟ್ಟಿದೆ.

ಎರಡನೆಯ ಬಾಗಿಲಿನ ಬಲಕ್ಕಿರುವುದೇ ಅದರ ಉಪಬಾಗಿಲು. ಇದನ್ನು ದೊಡ್ಡಬಾಗಿಲು ಮುಚ್ಚಿದಾಗ ಉಪಯೋಗಿಸುತ್ತಿದ್ದರು. ಉಚ್ಚಂಗಿ ಕೋಟೆಯ ದಕ್ಷಿಣಭಾಗದ ಹಿರೇಹೊಂಡದಿಂದ ಮಾರ್ಗವೊಂದು ಅದೇ ದಿಕ್ಕಿನಿಂದ ಕೋಟೆಯ ಒಳ ಪ್ರವೇಶಿಸುತ್ತದೆ. ಮತ್ತು

ಮಾರ್ಗದ ಉದ್ದಕ್ಕೂ ಹಾಕಿರುವ ಕಲ್ಲುಗಳು ತುಂಬಾ ಸವೆದಿರುವುದು ಕಂಡುಬರುತ್ತದೆ. ಪ್ರಾಚೀನ ಕಾಲದಿಂದಲೂ ಈ ಕೋಟೆಗೆ ನೀರಿನ ಸರಬರಾಜು ಇಲ್ಲಿಂದ ಆಗಿರಬಹುದು. ಈ ಭಾಗದಲ್ಲಿ ಪ್ರಾಚೀನ ದೇವಾಲಯವಿದ್ದಿರಬಹುದಾದ ಕುರುಹುಗಳನ್ನು ಕಾಣಬಹುದು.

**ಕೋಟೆಯ ಮಹತ್ವ**

ಒಂದು ರಾಜ್ಯದ ಅಳಿವು ಉಳಿವಿಗೆ ರಾಜನ ಪಾತ್ರ ಎಷ್ಟು ಮುಖ್ಯವೋ ಕೋಟೆಗಳ ಪಾತ್ರವು ಅಷ್ಟೆ ಮುಖ್ಯವಾದುದು. ಕೋಟೆ ನೀರನ್ನು ಸಂಗ್ರಹಿಸುವ ಕೊಡ ಇದ್ದ ಹಾಗೆ. ಕೊಡಕ್ಕೆ ತೂತುಬಿದ್ದರೆ ನೀರು ಉಳಿಯಬಾರದು. ಹಾಗೆಯೇ ಕೋಟೆಯು ಸಡಿಲವಾದರೆ ರಾಜ್ಯ ಉಳಿಯಲಾರದು. ಕೋಟೆಯನ್ನು ಗೆದ್ದುದಾದರೆ ಇಡೀ ರಾಜ್ಯವೇ ಸಿಕ್ಕಂತೆ. ಅಂದು ಕೋಟೆಯನ್ನು ಕಟ್ಟಿಸುವುದು ಮತ್ತು ಗೆಲ್ಲುವುದು ಪ್ರತಿಷ್ಠೆಯ ವಿಷಯವಾಗಿತ್ತು.

ಉಚ್ಚಂಗಿ ಕೋಟೆಯು ಮಹತ್ವದ ಮತ್ತು ಅಭೇದ್ಯವಾದ ಕೋಟೆಯಾಗಿದ್ದು, ಕಾಡುವೆಟ್ಟಿ ಎಂಬ ಪಲ್ಲವ ದೊರೆಯು ಇದನ್ನು ದೀರ್ಘಕಾಲದವರೆಗೆ ಮುತ್ತಿ ತನ್ನ ಶೌರ್ಯದಿಂದ ಸ್ಥಳೀಯರನ್ನು ದಂಗುಬಡಿಸಿದರೂ ಅವನಿಂದ ಕೋಟೆಯನ್ನು ಗೆಲ್ಲಲಾಗಲಿಲ್ಲ.[29] ಗಂಗವಂಶದ ಎರಡನೇ ಮಾರಸಿಂಹನು ಕ್ರಿ.ಶ. ೯೭೧ ರಲ್ಲಿ ಚಾಳುಕ್ಯರಿಂದ ಇದನ್ನು ವಶಪಡಿಸಿಕೊಂಡನಲ್ಲದೆ ಈ ಕೋಟೆಯನ್ನು ಜಯಿಸುವುದರಲ್ಲಿ ಚಾವುಂಡರಾಯನ ಪಾತ್ರ ಮಹತ್ವದ್ದಾಗಿದ್ದುದರಿಂದ ಅವನಿಗೆ ರಣರಂಗ ಸಿಂಹ ಎಂಬ ಬಿರುದು ಬಂದಿದೆ.[30] ಹೊಯ್ಸಳ ಬಲ್ಲಾಳರ ಇವು ಉಚ್ಚಂಗಿಯ ಅಭೇದ್ಯವಾದ ಕೋಟೆಯನ್ನು ಭೇದಿಸಲು ತಂಡೋಪ ತಂಡ ಆನೆಗಳನ್ನು ಉಪಯೋಗಿಸಿದನು. ಇವು ಕ್ರೂರವಾಗಿ ಕೋರೆಗಳಿಂದ ಅಗೆದು ಕೋಟೆಯ ಗೋಡೆಗಳನ್ನು ಕೆಡಹಿದ ನಂತರ ಸೈನ್ಯವು ಒಳಹೊಕ್ಕು ಸ್ತ್ರೀಯರು, ಕುದುರೆ ಸವಾರ, ಸೈನ್ಯವನ್ನು ಮತ್ತು ಖಜಾನೆಯನ್ನು ಸುಲಿಗೆ ಮಾಡಲಾಯಿತು.

**ಈ ಹಿನ್ನೆಲೆಯಲ್ಲಿ ಕೆಲವು ಪ್ರಶ್ನೆಗಳನ್ನೆತ್ತಿ ಸದ್ಯ ಚರ್ಚಿಸಲಾಗಿದೆ.**

೧. ಉಚ್ಚಂಗಿ ದುರ್ಗವನ್ನು ಗೆಲ್ಲಲು ಕಷ್ಟಕರವಾಗಿರಬಹುದೇಕೆ?
೨. ಇದನ್ನು ಗೆಲ್ಲುವುದರ ಮಹತ್ವವೇನು?
೩. ಗೆದ್ದವರ ಪ್ರತಿಷ್ಠೆ ಏಕೆ ಹೆಚ್ಚುತ್ತಿತ್ತು?

ಒಂದನೇ ಪ್ರಶ್ನೆಗೆ ಪೂರಕವಾದಂತೆ ಉಚ್ಚಂಗಿದುರ್ಗವು ಭೌಗೋಳಿಕವಾಗಿ ಇದರ ಸುತ್ತಮುತ್ತಲಿನ ಪ್ರದೇಶಗಳಿಗಿಂತಲೂ ಎತ್ತರವಾಗಿದ್ದು, ಸುತ್ತಲೂ ಆಳವಾದ ಕಂದಕಗಳು ಮತ್ತು ಕಡಿದಾದ ಬೆಟ್ಟವನ್ನು ಹೊಂದಿದ್ದು ಕೋಟೆಯೊಳಗೆ ಪ್ರವೇಶಿಸಲು ಸುಲಭವಾಗಿರಲಿಲ್ಲ. ಎರಡನೆಯದಾಗಿ ಈ ಕೋಟೆಯು ೨೫ ಕಿ.ಮೀ. ಉದ್ದವಾಗಿದ್ದು ಉತ್ತರದಿಂದ ದಕ್ಷಿಣಭಾಗದ ಮಧ್ಯಭಾಗಕ್ಕೆ ಇಳಿಮುಖವಾಗಿದ್ದು ಮತ್ತೆ ಇದೇ ಇಳಿಮುಖವನ್ನು ಪುನಃ ದಕ್ಷಿಣಭಾಗಕ್ಕೆ ಕಾಣಲಾಗುವುದು ತುಂಬಾ ಅಗಲ ಮತ್ತು ಎತ್ತರವಾದ ಗೋಡೆಗಳ ರಚನೆಯಿದ್ದು ಗಾರೆಯನ್ನು ಬಳಸಿ ಭದ್ರಪಡಿಸಲಾಗಿದೆ. ಕೋಟೆಯ ಬಾಗಿಲುಗಳನ್ನು ಪತ್ತೆಹಚ್ಚಿ ಮೊದಲ ಐದು ಬಾಗಿಲುಗಳನ್ನು ದಾಟಿ ಒಳಬರುವುದು ಕಠಿಣತರ ಕೆಲಸವೇ ಸರಿ. ಬೆಟ್ಟದ ಮೇಲಿನ ಕೋಟೆಗೆ ಆನೆಗಳಾಗಲೀ ಕುದುರೆ ಮತ್ತು ಶಸ್ತ್ರಗಳನ್ನು ತೆಗೆದುಕೊಂಡು ಹೋಗಲು ಸಶಕ್ತವಾದ ಸೈನ್ಯವಿರಲೇಬೇಕಾಗುವುದು. ಮೂರನೆಯದಾಗಿ ಕೋಟೆ ಒಳಗಡೆ ನೀರಿನ ಸೌಲಭ್ಯವಿದ್ದುದರ ಗುರುತುಗಳನ್ನು ಕಂಡುಬರುತ್ತವೆ ಮತ್ತು ಪೂರ್ವದ ಬಾಗಿಲು ಆಕ್ರಮಿಸಲ್ಪಟ್ಟರೂ ಪಶ್ಚಿಮದ ಹರಿಹರದ ಬಾಗಿಲಿನಿಂದ ಹೊರಬರುವ ಸೌಲಭ್ಯವಿರುವುದು ಕಾಣಬಹುದಾಗಿದೆ. ಎರಡನೆಯ ಪ್ರಶ್ನೆಯನ್ನು ಗಮನಿಸಿದರೆ ಉಚ್ಚಂಗಿದುರ್ಗ ಒಂದು ಪಟ್ಟಣವಾಗಿದ್ದು ವಿಶಾಲ ಪ್ರದೇಶಗಳನ್ನು ಒಳಗೊಂಡಿತ್ತು ನೊಳಂಬವಾಡಿ ೩೨೦೦೦ವನ್ನು ವೆಂಗಿಮಂಡಳೇಶ್ವರ ವಿಷ್ಣುವರ್ಧನ ವಿನಯಾದಿತ್ಯ ದೇವನು ಆಳುವಾಗ ಉಚ್ಚಂಗಿದುರ್ಗ ಪ್ರಮುಖ ಕೇಂದ್ರವಾಗಿದ್ದಿರಬೇಕು. ಆಗ ಉಚ್ಚಂಗಿ ಮೂವತ್ತನ್ನು ದೇವಪ್ಪಯ್ಯ ಆಳುತ್ತಿದ್ದ. ಮೂವತ್ತು ಗ್ರಾಮಗಳಿಗೆ ಉಚ್ಚಂಗಿ ಕೇಂದ್ರವಾಗಿರಬಹುದು ಮತ್ತು ಅದು ನೊಳಂಬವಾಡಿ ೩೨೦೦೦ ಕ್ಕೆ ಪಾಂಡ್ಯರ ಕಾಲದಲ್ಲಿ ರಾಜಧಾನಿಯಾಗಿತ್ತು. ಮತ್ತು ದಕ್ಷಿಣದಿಂದ ಗಂಗಾ ಹೊಯ್ಸಳರಿಗೆ ಉತ್ತರದಿಂದ ರಾಷ್ಟ್ರಕೂಟ ಚಾಳುಕ್ಯರಿಗೆ

ಗಡಿಭಾಗವಾಗಿಲಿಕ್ಕೂ ಸಾಧ್ಯತೆಯಿರುವುದರಿಂದ ಉಚ್ಚಂಗಿ ಕೋಟೆಯನ್ನು ಗೆಲ್ಲುವುದು ಒಂದು ಪ್ರತಿಷ್ಠೆಯ ವಿಷಯವಾಗಿದ್ದುದಲ್ಲದೆ ಮಹತ್ವದ ಭಾಗವೂ ಆಗಿತ್ತು ಎಂದೆಲ್ಲ ಹೇಳಬಹುದು. ಪಾಳೆಯಗಾರ ಅವಧಿಯಲ್ಲಿ ಈ ಕೋಟೆಯ ಪ್ರಮುಖವಾದ ದುರಸ್ತಿಕಾರ್ಯ ನಡೆದಿರುವುದು ಕಂಡುಬರುತ್ತದೆ.

**ಕೋಟೆಯಲ್ಲಿರುವ ಸ್ಮಾರಕಗಳು**

ಈ ಕೋಟೆ ಪ್ರದೇಶದಲ್ಲಿ ಆ ಕಾಲದ ಹತ್ತಾರು ಗುಡಿಗೋಪುರಗಳು, ಬಾವಿಹೊಂಡಗಳು, ಕಲಾಸ್ಮಾರಕಗಳು ಕಂಡುಬರುತ್ತವೆ. ಅವುಗಳ ಕುರಿತಾಗಿ ಇಲ್ಲಿ ಚರ್ಚಿಸಲಾಗಿದೆ.

**ಬನಶಂಕರಿ ದೇವಾಲಯ :** ಬಾದಾಮಿ ಚಾಳುಕ್ಯರ ಆರಾಧನಾ ದೇವತೆ ಈಕೆ. ಬಾದಾಮಿ ಚಾಳುಕ್ಯರ ಕಾಲಾವಧಿಯಿಂದ ವಿಜಯನಗರದ ಅರಸರಾದಿಯಾಗಿ ಬನಶಂಕರಿಯು ನೂರಾರು ದೇವಾಲಯಗಳನ್ನು ನಿರ್ಮಿಸಿದ ನಿದರ್ಶನಗಳಿವೆ. ಕಾಡಿನ ಮಧ್ಯ ವಾಸಿಸುವ ಬುಡಕಟ್ಟು ಜನರ ಪ್ರಮುಖ ದೇವತೆಗಳಲ್ಲಿ ಈ ದೇವತೆಯು ಒಬ್ಬಳು. ಉಚ್ಚಂಗಿ ದುರ್ಗದ ಆಗ್ನೇಯಕ್ಕೆ ಅರಸನ ಬಾವಿ ಇದೆ. ಇದರ ಬಳಿ ಇರುವುದೆ ಬನಶಂಕರಿ ದೇವಾಲಯ. ಇದರಲ್ಲಿ ಗರ್ಭಗೃಹ, ಅಂತರಾಳ ಹಾಗೂ ಸಭಾಮಂಟಪಗಳಿವೆ. ಗರ್ಭಗೃಹದಲ್ಲಿ ಚೇಳು, ರುಂಡಮಾಲೆ ಮತ್ತು ಪತ್ರಕುಂಡಲಗಳಿಂದ ಕೂಡಿದ ಪೀಠದ ಬಿಲ್ಲು, ತ್ರಿಶೂಲ, ಖಡ್ಗ ಮತ್ತು ಢಮರುಗಳನ್ನು ಹಿಡಿದಿರುವ ಬನಶಂಕರಿಯ ವಿಗ್ರಹವಿದೆ. ಜಟಾ ಮುಕುಟಧಾರಿಯಾದ ಈ ಶಿಲ್ಪವು ಶಿಥಿಲವಾಗಿದೆ.

ಗರ್ಭಗೃಹ ಮತ್ತು ಅಂತರಾಳದ ಪ್ರವೇಶ ದ್ವಾರಗಳು ಸಾದಾ ಕೆತ್ತನೆಯಿಂದ ಕೂಡಿವೆ. ಸಭಾಮಂಟಪದ ಮಧ್ಯಭಾಗದಲ್ಲಿ ೬x೬ ಅಳತೆಯ ಹಾಸುಬಂಡೆಯಿದೆ. ಇದರಲ್ಲಿ ೧೪ ಕಂಬಗಳಿವೆ. ಇವುಗಳು ವೃತ್ತಾಕಾರದ ೮ ಮೂಲೆಯ ಪಟ್ಟಿಕೆಯಿಂದ ಕೂಡಿದ್ದು ಕೆಳಭಾಗಗಳಲ್ಲಿ ಕುಂಭ ಮೇಲ್ಭಾಗದಲ್ಲಿ ಮುಚ್ಚಳ, ಫಲಕ ಮತ್ತು ಬೋದಿಗೆಗಳಿವೆ. ಸಭಾಮಂಟಪವು ಜೀರ್ಣೋದ್ಧಾರವಾಗಿದ್ದು ಇದರ ಗೋಡೆಯಲ್ಲಿ ವೀರಗಲ್ಲನ್ನು ಸೇರಿಸಿ ನಿರ್ಮಿಸಲಾಗಿದೆ.

ಪೂರ್ವಾಭಿಮುಖವಾಗಿರುವ ಈ ದೇವಾಲಯವು ಸುಮಾರು ೩೦ ಅಡಿ ಉದ್ದ ೧೫ ಅಡಿ ಅಗಲವಾಗಿದೆ. ಇದನ್ನು ಕಪ್ಪು ಮಿಶ್ರಿತ ನೀಲಿಛಾಯೆಯ ಕಲ್ಲಿನಲ್ಲಿ ನಿರ್ಮಿಸಲಾಗಿದೆ. ಇಲ್ಲಿರುವ ಶಿಲ್ಪಗಳು, ವೀರಗಲ್ಲು ಹಾಗೂ ದೇವಾಲಯದ ರಚನೆಯು ಕಲ್ಯಾಣ ಚಾಳುಕ್ಯರ ಶೈಲಿಯನ್ನು ಹೋಲುತ್ತದೆ.

**ತವಕ್ಲೇಶ್ವರ ದೇವಾಲಯ :** ಗ್ರಾಮದ ಆಗ್ನೇಯದ ಕೋಟೆ ಹೊರಭಾಗಕ್ಕೆ ಈ ದೇಗುಲವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಗರ್ಭಗೃಹ, ಅಂತರಾಳ ಹಾಗೂ ಸಭಾಮಂಟಪಗಳಿಂದ ಕೂಡಿದೆ. ಐವತ್ತು ಅಡಿ ಉದ್ದ ಮೂವತ್ತು ಅಡಿ ಅಗಲವಾಗಿರುವ ಇದು ವಿಶಾಲವಾಗಿದೆ. ಗರ್ಭಗೃಹದಲ್ಲಿ ಸುಮಾರು ಒಂದೂವರೆ ಅಡಿ ಎತ್ತರದ ಶಿವಲಿಂಗವು ಬ್ರಹ್ಮಸೂತ್ರವನ್ನು ಹೊಂದಿರುವುದಿಲ್ಲ. ಇದರ ಪ್ರವೇಶದ್ವಾರದ ಲಲಾಟಬಿಂಬ ಹಾಗೂ ಅಂತರಾಳದ ಪ್ರವೇಶದ್ವಾರದ ಲಲಾಟಬಿಂಬಗಳಲ್ಲಿ ಗಜಲಕ್ಷ್ಮಿ ಶಿಲ್ಪಗಳಿವೆ. ಇವುಗಳ ಭುವನೇಶ್ವರಿಯಲ್ಲಿ ಪದ್ಮಾಲಂಕೃತ ಕೆತ್ತನೆಗಳಿವೆ. ಅಂತರಾಳ ಪ್ರವೇಶದ ಪಾರ್ಶ್ವಗಳಲ್ಲಿ ಸುಮಾರು ಆರು ಅಡಿ ಎತ್ತರದ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಸಭಾಮಂಟಪ ಮಧ್ಯಭಾಗದ ನೆಲಕ್ಕೆ ೧೦x೧೦ ಚದುರಡಿಯ ಒಂದೇ ಕಲ್ಲಿನ ಚಪ್ಪಡಿಯನ್ನು ಹಾಸಲಾಗಿದೆ. ಇದರಲ್ಲಿ ಕಲ್ಯಾಣ ಚಾಳುಕ್ಯ ಮಾದರಿಯ ೨೦ ಕಂಬಗಳಿದ್ದು, ಉತ್ತರ ಮತ್ತು ದಕ್ಷಿಣ ದಿಕ್ಕುಗಳಿಗೂ ಪ್ರವೇಶದ್ವಾರಗಳಿವೆ.

ಈ ದೇವಾಲಯವನ್ನು ಕಪ್ಪುಶಿಲೆಯಲ್ಲಿ ನಿರ್ಮಿಸಿದ್ದು, ಶಾಸನಗಳು ಈ ದೇವಾಲಯವನ್ನು ಗಳಗೇಶ್ವರ ದೇವರೆಂದು ಉಲ್ಲೇಖಿಸುತ್ತವೆ.

**ಹಾಲಮ್ಮನ ದೇವಾಲಯ :** ಗ್ರಾಮದ ಆಗ್ನೇಯದ ಕೋಟೆ ಹೊರಮುಖಕ್ಕೆ ಈ ದೇವಾಲಯವಿದೆ. ನಾಗರಪಂಚಮಿಯಲ್ಲಿ ಇಲ್ಲಿಯ ಹುತ್ತಕ್ಕೆ ಹಾಲು ಹಾಕುವುದರಿಂದ ಇದಕ್ಕೆ ಹಾಲಮ್ಮನಗುಡಿ ಎಂದು ಹೆಸರು ಬಂದಿದೆ. ಇದು ೧೦x೧೦ ಅಡಿ ಸುತ್ತಳತೆ ಹೊಂದಿದ್ದು, ಗರ್ಭಗೃಹ ಮಾತ್ರ ಕಂಡುಬರುತ್ತದೆ. ಗರ್ಭಗೃಹದಲ್ಲಿ ಆಯತಾಕಾರದ ಆರು ಅಡಿ ಎತ್ತರದ ನಾಲ್ಕುಕಂಬಗಳು, ಬ್ರಾಹ್ಮಣ ಕನ್ಯೆಯರ ಮೂರು - ವಿಗ್ರಹಗಳು ಸಪ್ತಮಾತೃಕಾ ವಿಗ್ರಹ ಹಾಗೂ ಕುದುರೆಯ ಮೇಲೆ ಆಸೀನರಾದ ಜೋಡಿ ಪುರುಷರ ವೀರಗಲ್ಲು ಇದೆ. ಈ ವೀರಗಲ್ಲನ್ನು ಮೈಲಾರ ದೇವರೆಂದು ಸ್ಥಳೀಯರು ಅಭಿಪ್ರಾಯಪಡುತ್ತಾರೆ. ಈ ದೇವಾಲಯವನ್ನು ಕಪ್ಪುಮಿಶ್ರಿತ ನೀಲಿಛಾಯೆ ಬಳಪದ ಕಲ್ಲು ಬಳಸಿ ೧೨ನೆಯ ಶತಮಾನದಲ್ಲಿ ಉಚ್ಚಂಗಿ ದೇವಿಯ ಹೆಸರಿನಲ್ಲಿ ಕಟ್ಟಲಾಗಿದೆ.

**ಬಸವಣ್ಣ ದೇವಾಲಯ :** ಕೋಟೆ ಆಂಜನೇಯನ ಬಲಭಾಗದಲ್ಲಿ ಈ ದೇಗುಲವಿದೆ. ದಕ್ಷಿಣಾಭಿಮುಖವಾಗಿರುವ ಇದರಲ್ಲಿ ಗರ್ಭಗೃಹ ಮಾತ್ರ ಗೋಚರಿಸುತ್ತದೆ. ಗರ್ಭಗೃಹದ ಮಧ್ಯಭಾಗದಲ್ಲಿ ಖಾಲಿ ಪೀಠವಿದ್ದು, ಇದರ ಪಕ್ಕದಲ್ಲಿ ನಂದಿಯ ಶಿಲ್ಪವಿದೆ. ಪ್ರವೇಶದ್ವಾರವು ಮೂರು ಶಾಖೆಗಳಿಂದ ಕೂಡಿದ. ಶಾಖೆಗಳು ಶಿಲಾಬಾಲಿಕೆಯರು ಮತ್ತು ಸುಂದರ ಕೆತ್ತನೆಗಳಿಂದ ಕೂಡಿವೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಅಂತರಾಳ ಹಾಗೂ ಸಭಾಮಂಟಪಗಳಿದ್ದಿರಬಹುದಾದ ಕುರುಹುಗಳು ಮಾತ್ರ ಗೋಚರಿಸುತ್ತವೆ. ಈ ದೇವಾಲಯದ ಲಕ್ಷಣಗಳಿಂದ ಹೊಯ್ಸಳರ ಕಾಲದ್ದೆಂದು ದೃಢಪಡುತ್ತದೆ.

**ಕೆಳಕೋಟೆ ಆಂಜನೇಯ ದೇವಾಲಯ :** ಗ್ರಾಮದ ಪೂರ್ವದ ಹೊಲವೊಂದರಲ್ಲಿರುವ ಈ ದೇವಾಲಯವು ದಕ್ಷಿಣಕ್ಕೆ ಮುಖವಾಗಿದೆ. ಕೋಟೆಯ ಕೆಳಭಾಗದಲ್ಲಿರುವುದರಿಂದ ಕೆಳಕೋಟೆ ಆಂಜನೇಯನೆಂಬ ಹೆಸರು ಈ ದೇವಾಲಯಕ್ಕೆ ಬಂದಿದೆ. ಇದರಲ್ಲಿ ಗರ್ಭಗೃಹ ಹಾಗೂ ಸಭಾಮಂಟಪಗಳಿವೆ. ಗರ್ಭಗೃಹದಲ್ಲಿ ಸುಮಾರು ಆರು ಅಡಿ ಎತ್ತರದ ಆಂಜನೇಯನ ಶಿಲ್ಪವಿದೆ. ಸಭಾಮಂಟಪದಲ್ಲಿ ಸಾದಾ ಕೆತ್ತನೆಯ ಆರು ಕಂಬಗಳಿವೆ. ದೇವಾಲಯವನ್ನು ಕಣಶಿಲೆಯಿಂದ ನಿರ್ಮಿಸಲಾಗಿದ್ದು, ಇದರ ಸುತ್ತಲೂ ಪ್ರಾಕಾರ ಹಾಗೂ ಗರುಡಗಂಬವಿದೆ. ಉಚ್ಚಂಗಿದುರ್ಗದ ಪಾಳೆಯಗಾರರ ಅವಧಿಯಲ್ಲಿ ಇದು ನಿರ್ಮಾಣವಾಗಿದ್ದಿರಬೇಕು.

**ವೀರಭದ್ರ ದೇವಾಲಯ :** ಗ್ರಾಮದಿಂದ ದಾವಣಗೇರಿಗೆ ಹೋಗುವ ರಸ್ತೆಯ ಎಡಬದಿಯಲ್ಲಿ ಕೋಟೆ ಗೋಡೆಗೆ ಹೊಂದಿಕೊಂಡು ಈ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಇದು ಗರ್ಭಗೃಹ ಹಾಗೂ ಸಭಾಮಂಟಪಗಳಿಂದ ಕೂಡಿದೆ. ಸುಮಾರು ಮುವತ್ತು ಅಡಿ ಉದ್ದ ಮತ್ತು ಹತ್ತು ಅಡಿ ಅಗಲವಾಗಿದ್ದು, ಎತ್ತರದ ಸ್ಥಳದಲ್ಲಿದೆ. ಗರ್ಭಗೃಹದಲ್ಲಿ ಬಿಲ್ಲು, ಬಾಣ, ಖಡ್ಗ ಹಾಗೂ ಗುರಾಣಿಗಳನ್ನು ಹಿಡಿದಿರುವ ವೀರಭದ್ರನು ತ್ರಿಭಂಗಿಯಲ್ಲಿದ್ದಾನೆ. ವೀರಭದ್ರನ ಪಾರ್ಶ್ವದಲ್ಲಿ ಗಣೇಶನ ಶಿಲ್ಪವಿದೆ. ವೀರಭದ್ರನ ಶಿಲ್ಪವನ್ನು ಹೊಯ್ಸಳರ ಕಾಲದ ಶಾಸನವನ್ನು ಉಪಯೋಗಿಸಿ ನಿರ್ಮಿಸಲಾಗಿದೆ. ತಿಪ್ಪನಕೆರೆ ಮತ್ತು ಈಶ್ವರ ದೇವಾಲಯಗಳ ಉಲ್ಲೇಖಗಳು ಈ ಶಾಸನದಲ್ಲಿ ಬರುತ್ತವೆ. ಸಭಾಮಂಟಪವನ್ನು ಜೀರ್ಣೋದ್ಧಾರಗೊಳಿಸಲಾಗಿದೆ. ದೇವಾಲಯದ ಸುತ್ತಲೂ ಪ್ರಾಕಾರವಿದೆ. ಇದರಲ್ಲಿ ಸಪ್ತಮಾತೃಕಾ ಹಾಗೂ ಕಲ್ಲುಗಳಿವೆ.

ಈ ದೇವಾಲಯವು ವಿಜಯಗರೋತ್ತರ ಕಾಲದ್ದು, ಇದರ ನಿರ್ಮಾಣಕ್ಕೆ ಕಣಶಿಲೆಯನ್ನು ಬಳಸಲಾಗಿದೆ.

ನೊಣಬೇಶ್ವರ ದೇವಾಲಯ ಗ್ರಾಮದ ದಕ್ಷಿಣ ಭಾಗಕ್ಕೆ ಚಿಕ್ಕಹೊಂಡದ ಪೂರ್ವದಂಡೆಯ ಮೇಲಿರುವ ಕೋಟೆಗೆ ಹೊಂದಿಕೊಂಡಿರುವ ದೇಗುಲವಿದು. ಇದು ಪಶ್ಚಿಮಾಭಿಮುಖವಾಗಿದೆ. ಇದರಲ್ಲಿ ಗರ್ಭಗೃಹ ಹಾಗೂ ಅಂತರಾಳಗಳು ಮಾತ್ರ ಗೋಚರಿಸುತ್ತಿದ್ದು, ಸಭಾಮಂಟಪದ ಅವಶೇಷಗಳು ಕಂಡುಬರುತ್ತವೆ. ಗರ್ಭಗೃಹದಲ್ಲಿ ಉದ್ಭವ ಶಿವಲಿಂಗವಿದೆ. ಗರ್ಭಗೃಹ ಹಾಗೂ ಅಂತರಾಳಗಳ ಭುವನೇಶ್ವರಿಯಲ್ಲಿ ಪದ್ಮಗಳಿವೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ನಕ್ಷತ್ರಾಕಾರದ ಅಧಿಷ್ಠಾನದ ಮೇಲಿರುವ ದೇವಾಲಯದ ಹೊರಗೋಡೆಯಲ್ಲಿ ಹೊಯ್ಸಳ ಶೈಲಿಯ ದೇವಕೋಷ್ಠಕಗಳಿವೆ. ಕ್ರಿ.ಶ. ೧೨೮೫ ರ ಕಾಲ ಸೂಚಿಸುವ ಶಾಸನ ಹಾಗೂ ತುಂಡಾದ ಶಿಲಾಬಾಲಿಕೆ ಹಾಗೂ ವೀರಗಲ್ಲುಗಳಿವೆ. ಶಾಸನ ಅಸ್ಪಷ್ಟವಾಗಿದೆ. ೧೩ನೆ ಶತಮಾನದಲ್ಲಿ ನೊಣಬೇಶ್ವರ, ನೊಣಬೇಶ್ವರ ದೇವ, ನೊಯ್ಯೇಶ್ವರ ದೇವ, ನೊಳಂಬೇಶ್ವರ, ನೊಳಂಬೇಶ್ವರ ದೇವರ ಹೆಸರಲ್ಲಿ ಅನೇಕ ದೇವಾಲಯಗಳು ನಿರ್ಮಾಣವಾಗಿವೆ. ಈ ದೇವಾಲಯವು ೧೩ನೇ ಶತಮಾನದ ಆದಿಭಾಗದಲ್ಲಿ ನಿರ್ಮಾಣಾವದಂತೆ ಭಾಸವಾಗುತ್ತದೆ.

**ಇತರೆ ದೇವಾಲಯಗಳು :** ಉಚ್ಚಂಗಿ ದುರ್ಗದ ಕೋಟೆಯ ಮಧ್ಯ ಎತ್ತರ ಪ್ರದೇಶದಲ್ಲಿ ಉಚ್ಚಂಗೆಮ್ಮ ದೇವತೆಯ ದೇಗುಲವಿದೆ. ಇದು ಪ್ರಾಚೀನ ಕಾಲದ ವಾಸ್ತುವಾದರೂ ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತಾ ಬಂದಿದೆ. ಕೋಟೆಯೊಳಗೆ ಹರಿಹರದ ಬಾಗಿಲ ಬಳಿ ದಕ್ಷಿಣಾಭಿಮುಖವಾದ ಆಂಜನೇಯ ದೇವಾಲಯವಿದೆ. ಸಿದ್ಧೇಶ್ವರ ಮಠ ಒಳ ಕೋಟೆ ಗೋಡೆಗೆ ಹೊಂದಿಕೊಂಡ. ಇದು ಪ್ರಾಚೀನ ಕಾಲದ ದೇಗುವಾಗಿದ್ದು ಇತ್ತೀಚೆಗೆ ಮಠವಾಗಿ ಪರಿವರ್ತನೆ ಹೊಂದಿದೆ. ಕುಷ್ಟದ ಎಲ್ಲಮ್ಮ ಇಲ್ಲಿಯ ಜನರ ಕುಷ್ಟ ನಿವಾರಕ ದೇವತೆಯಾಗಿದ್ದಾಳೆ. ಈ ಕೋಟೆಯ ೩ನೇ ಬಾಗಿಲುವಾಡದ ಹಿಂಬದಿಯಲ್ಲಿ ಬಸವಣ್ಣ ದೇವಾಲಯ ಕಂಡುಬರುತ್ತದೆ. ವಿರೂಪಾಕ್ಷ ದೇವಾಯವು ರಾಣಿ ಅರಮನೆಯ ಕೆಳಗಿಳಿಯುವ ಮಾರ್ಗ ಮಧ್ಯದಲ್ಲಿ ಬಟ್ಟಲಬಾವಿ ಬಲಭಾಗದಲ್ಲಿದೆ. ಕೋಟೆಯ ಒಳಗೆ ಹಾಗೂ ಗೋಡೆಗೆ ಹೊಂದಿಕೊಂಡಿರುವ ದೇಗುಲಗಳೆಂದರೆ ಶಿವ, ರಾಮಲಿಂಗೇಶ್ವರ, ಜೈನ, ಹಾಲಮ್ಮ ದೇವಾಲಯಗಳು.

**ಅರಮನೆಗಳು :** ಸಾಮಾನ್ಯವಾಗಿ ಅರಮನೆಗಳೆಂದರೆ ಅರಸರು ವಾಸಿಸುತ್ತಿದ್ದ ಮನೆಗಳೆಂದು ಗುರುತಿಸುತ್ತೇವೆ. ದೊಡ್ಡ ಕಟ್ಟಡವನ್ನು ಹೊಂದಿರುವ ಮನೆಗಳಿಗೆ ಅರಮನೆ ಎಂದು ಕರೆಯುವ ವಾಡಿಕೆಯುಂಟು.

ಉಚ್ಚಂಗಿದುರ್ಗದ ಬೆಟ್ಟದ ಮೇಲಿನ ಕೋಟೆಯೊಳಗೆ ರಾಜ ಮತ್ತು ರಾಣಿಯ ಎರಡು ಅರಮನೆಗಳಿವೆ. ರಾಜನ ಅರಮನೆಗೆ ಉತ್ತರದಿಂದ ಪ್ರವೇಶದ್ವಾರವಿದೆ. ಇದರ ಮುಖಭಾಗದಲ್ಲಿ ಉಚ್ಚಂಗೆಮ್ಮ ದೇವತೆಯ ಗುಡಿಯಿದೆ. ಈ ಅರಮನೆ ಚೌಕಾಕಾರದಲ್ಲಿದ್ದು, ನಾಲ್ಕು ಮೂಲೆಗಳಿಂದ ಕೂಡಿದೆ. ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಸುಮಾರು ೧೦೦ ಅಡಿ ಅಂತರವಿದೆ. ನಾಲ್ಕು ಮೂಲೆಗಳ ಮೇಲೆ ಚೌಕಾಕಾರದ ಬುರುಜುಗಳಿವೆ.

ಈ ಬುರುಜುಗಳು ಮೂರು ಅಂತಸ್ತುಗಳಿಂದ ಕೂಡಿದೆ. ಮೇಲಿನ ಅಂತಸ್ತಿಗೆ ಹೋಗಲು ಕೆಳಮಟ್ಟದಿಂದ ಮೆಟ್ಟಿಲುಗಳನ್ನು ಜೋಡಿಸಲಾಗಿದೆ. ಈ ಬುರುಜುಗಳ ಸುತ್ತಲೂ ಕಿಂಡಿಗಳಿವೆ. ಶತ್ರುಗಳ ಚಲನವಲನ ಗಮನಿಸಲೆಂದು ಮತ್ತು ಅರಮನೆಯ ರಕ್ಷಣೆಗೆ ಈ ಕಿಂಡಿಗಳಿರಬಹುದು. ಸುತ್ತೂಲ ಗೋಡೆಗಳು ಮಾತ್ರ ಉಳಿದುಕೊಂಡಿವೆ. ಇದೇ ಸ್ಥಿತಿಯನ್ನು ಹೋಲುವ ರಾಣಿಯ ಅರಮನೆಯ ರಾಜನ ಅರಮನೆಯ ಹಿಂಭಾಗಕ್ಕೆ ಇದೆ, ಗೋಡೆಗಳಲ್ಲಿ ಉಬ್ಬು ಚಿತ್ರಗಳಿವೆ, ಇಲ್ಲಿ ಅರಸನ ಬಾವಿ, ಅರಸಿಯ ಹೊಂಡ, ಹಿರೇ ಹೊಂಡ, ಚಿಕ್ಕ ಹೊಂಡ, ಆನೆ, ಬಟ್ಟಲ ಬಾವಿ, ತೊಟ್ಟಿಲ ಬಾವಿಗಳು ಕಂಡುಬರುತ್ತವೆ.

[1] ಉಚ್ಚಂಗಿದುರ್ಗದ ಹಾಲಮ್ಮನ ದೇವಾಲಯದ ಗೋಡೆಗೆ ಒರಗಿಸಿರುವ ಶಾಸನ.

[2] ಕೊಟ್ರೇಶ್, ಎಂ. ೧೯೯೬ (ಉಚ್ಚಂಗಿದುರ್ಗ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ), ಎಂ.ಫಿಲ್ ಪ್ರಬಂಧ, ಪು. ೧೭ ಹಂಪಿ: ಕನ್ನಡ ವಿಶ್ವವಿದ್ಯಾಲಯ

[3] ಅದೇ, ಪು. ೧೭

[4] ಅದೇ, ಪು. ೧೭

[5] ಗೋವಿಂದಾಚಾರ್ಯ ಚಿಕ್ಕೆರೂರು, ಅಪ್ರಕಟಿತ ಹಸ್ತಪ್ರತಿ

[6] ಉಚ್ಚಂಗಿದುರ್ಗ (ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ), - ಪೂರ್ವೋಕ್ತ, ಪು. ೧೬

[7] ಪಂಚಮುಖಿ, ಆರ್.ಎಸ್.೧೯೬೭, ಕರ್ನಾಟಕ ಇತಿಹಾಸ ಪು.೧೦೫, ಧಾರವಾಡ ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ.

[8] ಅದೇ, ಪು.೧೦೬

[9] ಅದೇ, ಪು. ೧೩೪

[10] ಉಚ್ಚಂಗಿದುರ್ಗ (ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ), ಪೂರ್ವೋಕ್ತ ಪು.೧೮

[11] ಅದೇ, ಪು.೧೮

[12] ದೇವರಕೊಂಡಾರೆಡ್ಡಿ, ಮತ್ತು ಇತರರು, ೧೯೯೮. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧, ಪು. ಹಂಪಿ ಕನ್ನಡ ವಿಶ್ವವಿದ್ಯಾಲಯ

[13] ಅದೇ, ಪು. ೩೫

[14] ಅದೇ, ಪು. ೩೮

[15] Zakia Khanum Ansari. 1998. Some Feudatory Families of medieval Karnataka – A Study. pp.148 – 152. Dharwad : Shrihariu Prakashana

[16] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧, ಪೂರ್ವೋಕ್ತ, ಪು.೪೭೩

[17] ಅದೇ, ಪ.೪೭೩

[18] ಅದೇ, ಪು. ೪೬೫

[19] ಅದೇ, ಪು. ೪೬೭

[20] SII IX (pt.1)No 572 ಉಚ್ಚಂಗಿದುರ್ಗ

[21] ಸೂರ್ಯನಾಥ, ಯು.ಕಾಮತ್, ೧೯೮೯, ಕರ್ನಾಟಕದ ಇತಿಹಾಸ, ಪು.೪೪೧, ಬೆಂಗಳೂರು ಪ್ರಕಾಶನ ಸಾಹಿತ್ಯ

[22] ಅದೇ, ಪು.೪೪೫

[23] ಸದಾಶಿವಪ್ಪ, ಕುಂ.ಬಾ.೧೯೯೬, ಹರಪನಹಳ್ಳಿ ಪಾಳೆಯಗಾರರು, ಪು ೭ ೧೪, ಬಾಂಗಳೂರು ಕನ್ನಡ ಸಾಹಿತ್ಯ ಪರಿಷತ್ತು

[24] ಉಚ್ಚಂಗಿದುರ್ಗ (ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ), ಪೂರ್ವಕ್ತ, ಪು. ೧೭ - ೧೮

[25] SII IX (pt.1) No. 126 ಉಚ್ಚಂಗಿದುರ್ಗ

[26] SII IX (pt.1)No. 575 ಉಚ್ಚಂಗಿದುರ್ಗ

[27] EC, Vol - 2 ಶ್ರವಣಬೆಳಗೋಳ

[28] ಹರಪನಹಳ್ಳಿ ಪಾಳಯಗಾರರು, ಪೂರ್ವೋಕ್ತ, ಪು.೭ ೫೦

[29] ಚನ್ನಬಸಪ್ಪ,ಎಸ್, ಪಾಟೀಲ, ೧೯೯೫, ಹೊಯ್ಸಲರಿಗೆ ಗಿರಿದುರ್ಗಮಲ್ಲ ಮತ್ತು ಶನಿವಾರಸಿದ್ದ ಬಿರುದುಗಳನ್ನಿತ್ತ ಉಚ್ಚಂಗಿದುರ್ಗ, ಇತಿಹಾಸ ದರ್ಶನ ೧೦, ಪು. ೧೫೭ - ೧೬೦

[30] ಉಚ್ಚಂಗಿದುರ್ಗ (ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ), ಪೂರ್ವಕ್ತ, ಪು.೮೨

## ೨. ಕರಡಿ ದುರ್ಗ

ಕರಡಿದುರ್ಗ ಇರುವ ಹರಪನಹಳ್ಳಿ ತಾಲ್ಲೂಕು ಮೊದಲು ಬಳ್ಳಾರಿ ಜಿಲ್ಲೆಯಲ್ಲಿದ್ದು, ಇತ್ತೀಚೆಗಷ್ಟೇ ಪುನರ್ ರಚಿತ ದಾವಣಗೇರಿ ಜಿಲ್ಲೆಗೆ ಸೇರಿರುತ್ತದೆ. ಇದು ಹರಪನಹಳ್ಳಿ ದಕ್ಷಿಣ ದಿಕ್ಕಿಗೆ ೨೯ ಕಿ.ಮೀ. ದೂರದ ಇತಿಹಾಸ ಪ್ರಸಿದ್ಧ ಉಚ್ಚಂಗಿದುರ್ಗದ ಹಿಂಭಾಗದಲ್ಲಿದೆ. ಇದೊಂದು ಸುಮಾರು ೧೦೦ ಮನೆಗಳಿರುವ ಕುಗ್ರಾಮ. ಇದರ ಉತ್ತರ ದಿಕ್ಕಿನಲ್ಲಿರುವ ಬೆಟ್ಟದ ಮೇಲೆ ಕೋಟೆ ಇದೆ.

**ಇತಿಹಾಸ**

ಈ ಪ್ರದೇಶ ಶಿಲಾಯುಗಗಳ ಕಾಲದಿಂದಲೂ ಮಾನವನಿಗೆ ತಾಣವಾಗಿ ರಾಜಕೀಯ ಮತ್ತು ಸಾಂಸ್ಕೃತಿಕವಾಗಿ ಪ್ರಸಿದ್ಧ ಹೊಂದಿರುವುದು ಸತ್ಯಸಂಗತಿಯಾಗಿದೆ. ಅಂತೆಯೇ ಹಲವಾರು ಕೋಟೆಗಳನ್ನು ಈ ಸುತ್ತಮುತ್ತಲಿನ ಪರಿಸರದಲ್ಲಿ ಪರಿಸರದಲ್ಲಿ ಕಾಣಬಹುದು. ಅವುಗಳಲ್ಲಿ ವೀರನದುರ್ಗ, ಹರಪನಹಳ್ಳಿ, ಚಿಗಟೇರಿ, ಬಂಡ್ರಿ, ದೇವಲಾಪುರ, ಉಚ್ಚಂಗಿದುರ್ಗದ ಕೋಟೆಗಳು ಮುಖ್ಯವಾಗಿವೆ. ಇವುಗಳಂತೆಯೇ ಇದುವರೆಗೂ ಬೆಳಕಿಗೆ ಬಾರದ ಹಾಗೂ ವ್ಯವಸ್ಥಿತವಾಗಿ ನಿರ್ಮಾಣವಾಗಿರುವ ಕೋಟೆಗಳಲ್ಲಿ ಕರಡಿದುರ್ಗವು ಒಂದು. ಈ ಕೋಟೆಯನ್ನು ಕುರಿತು ಇದುವರೆಗೆ ಯಾವುದೇ ಅಧ್ಯಯನ ನಡೆದಿಲ್ಲ. ಸ್ಥಳೀಯರು ಕೋಟೆ ಮತ್ತು

ಗ್ರಾಮವನ್ನು ಒಳಗೊಂಡ ಬೆಟ್ಟವನ್ನು ಹೆಸರಿಸುತ್ತಿರುವುದು ಕರಡಿದುರ್ಗವೆಂದು. ಇಲ್ಲಿ ದಟ್ಟವಾದ ಕಾಡು ಗಿರಿ - ಕಂದಕಗಳಿರುವುದರಿಂದ ಇಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕರಡಿಗಳು ವಾಸಿಸುತ್ತಿದ್ದವಂತೆ. ಈ ಕಾರಣವಾಗಿಯೇ ಆ ಗ್ರಾಮಕ್ಕೆ ಕರಡಿದುರ್ಗವೆಂದು ಕರೆಯಲಾಗಿದೆ. ಎನ್ನುವುದು ಇಲ್ಲಿಯ ಪ್ರತೀತಿ. ಕನ್ನಡ ನಿಘಂಟುವಿನಲ್ಲಿ ಬರುವ ಕರಡಿಗೆ ಎಂಬುದರ ಶಬ್ದ ಅರ್ಥವು ಪೆಟ್ಟಿಗೆ, ಚಿಕ್ಕದು ಎಂಬ ಪದಗಳನ್ನು ನಿರ್ದೇಶಿಸುತ್ತಿದ್ದು, ಈ ಕೋಟೆಯು ಚಿಕ್ಕದಿದ್ದು, ಪೆಟ್ಟಿಗೆಯಾಕಾರದಲ್ಲಿರುವುದನ್ನು ಕಂಡಾಗ ಅಲ್ಲಿಯ ಕೋಟೆಯನ್ನು ಸೂಚಿಸಲು ಕರಡಿಗೆ ಎಂಬ ವಿಶೇಷಣವನ್ನು ಸೇರಿಸಿಕೊಂಡಿರಬೇಕು. ಹಾಗಾಗಿ ಈ ಗ್ರಾಮಕ್ಕೆ ಕರಡಿದುರ್ಗ ಎಂಬ ಹೆಸರು ಪ್ರಾಪ್ತವಾಗಿರಬಹುದು. ಪ್ರಾಯಶಃ ಇಲ್ಲಿಯ ಪಾಳೆಯಗಾರರು ನಶಿಸಿದ ನಂತರ ಈ ಕೋಟೆಯು ಕರಡಿಗಳ ವಾಸಸ್ಥಾನವಾಗಿರಬೇಕು. ಈ ಹಿನ್ನೆಲೆಯಲ್ಲಿಯೂ ಕರಡಿದುರ್ಗ ಎಂಬ ನಾಮವು ಪ್ರಚಲಿತದಲ್ಲಿದೆ.

ಉಚ್ಚಂಗಿದುರ್ಗದಂತೆ ಕರಡಿದುರ್ಗದ ಪ್ರದೇಶವೂ ಮೌರ್ಯರಿಗೆ, ಕದಂಬರಿಗೆ, ಕಲ್ಯಾಣ ಚಾಳುಕ್ಯರಿಗೆ, ನೊಳಂಬರಿಗೆ, ಪಾಂಡ್ಯರಿಗೆ, ಹೊಯ್ಸಳರಿಗೆ, ವಿಜಯನಗರದರಸರ ಆಳ್ವಿಕೆಗೆ ಒಳಪಟ್ಟಿದ್ದಲ್ಲದೆ ಹರಪನಹಳ್ಳಿಯ ಪಾಳೆಗಾರರಿಗೆ ಪ್ರಮುಖ ಸೈನಿಕ ನೆಲೆಯಾಗಿತ್ತು. ಹರಪನಹಳ್ಳಿ ಪಾಳೆಯಪಟ್ಟು ಕ್ರಿ.ಶ. ೧೫೬೫ ರಲ್ಲಿ ದಾದಯ್ಯ ನಾಯಕನಿಂದ ಆರಂಭವಾಯಿತು. ಕ್ರಿ.ಶ. ೧೭೯೯ ರಲ್ಲಿ ಇಮ್ಮಡಿ ಸೋಮಶೇಖರ ನಾಯಕನ ಪತ್ನಿ ನೀಲಮ್ಮಾಜಿಯವರಿಗೆ ನಡೆಸಿದ ಈ ಮನೆತನದ ಆಳ್ವಿಕೆ ಬ್ರಿಟಿಷರಿಂದ ಕೊನೆಗೊಂಡಿದೆ.[1] ಸುಮಾರು ೨೫೦ ವರ್ಷಗಳ ಅವಧಿಯಲ್ಲಿ ಹರಪನಹಳ್ಳಿ ಪಾಳೆಯಗಾರರು ರಾಜ್ಯ ವಿಸ್ತರಿಸುವ ನಿಟ್ಟಿನಲ್ಲಿ ತಮ್ಮ ಸೈನಿಕ ನೆಲೆಗಳನ್ನು ಹಲವೆಡೆ ಸ್ಥಾಪಿಸಿದರು. ಅವುಗಳಲ್ಲಿ ಬಂಡ್ರಿ, ಚಿಕ್ಕಹಳ್ಳಿ, ಬೂದುನೂರು, ವೀರನದುರ್ಗ, ಉಚ್ಚಂಗಿದುರ್ಗ, ಚಿಗಟೇರಿ, ತಂಬ್ರಹಳ್ಳಿ, ಕುರದಗಡ್ಡೆ, ಹೊಳಲು, ಹ್ಯಾರಡ ಮತ್ತು ಕರಡಿದುರ್ಗಗಳು ಮುಖ್ಯವಾಗಿವೆ. ಕರಡಿದುರ್ಗದಲ್ಲಿ ಸೈನ್ಯದ ಒಂದು ಭಾಗವನ್ನು ಇಡಲಾಗಿದ್ದಿತೆಂಬುದು ಕೋಟೆಯ ಅವಶೇಷಗಳಿಂದ ಮತ್ತು ಅಲ್ಲಿಯ ಶಾಸನದಿಂದ ತಿಳಿದುಬರುತ್ತದೆ.[2]

**ಕೋಟೆಯ ನಿರ್ಮಾಣ**

ವಿಜಯನಗರೋತ್ತರ ಕಾಲದಲ್ಲಿ ತಲೆ ಎತ್ತಿ ಪ್ರಸಿದ್ಧಿ ಹೊಂದಿದ ಪಾಳೆಯಪಟ್ಟುಗಳಲ್ಲಿ ಹರಪನಹಳ್ಳಿಯು ಒಂದು. ಈ ಪಾಳೆಯಗಾರರು ತಮ್ಮ ರಾಜ್ಯದ ವಿಸ್ತರಣೆಯ ದಾಹದಿಂದ ತಮ್ಮ ಸೈನಿಕ ನೆಲೆಗಳಾಗಿ ಬಹುತೇಕ ಕಡೆ ಕೋಟೆಗಳನ್ನು ಕಟ್ಟಿಸಿದರು. ಅಂಥವುಗಳಲ್ಲಿ ಈ ಕರಡಿದುರ್ಗವು ಮುಖ್ಯವಾದುದು. ಈ ಕೋಟೆಯನ್ನು ಹರಪನಹಳ್ಳಿ ಪಾಳೆಯಗಾರ ಮುಮ್ಮಡಿ ಬಸಪ್ಪ ನಾಯಕನು ಕಟ್ಟಿಸಿರಬಹುದೆಂದು ಸ್ಥಳೀಯರ ಪ್ರತೀತಿ ಇದೆ. ಇದಕ್ಕೆ ಪೂರಕವೆಂಬಂತೆ ಕರಡಿದುರ್ಗದ ಕೋಟೆಯೊಳಗೆ ಇರುವ ಆಂಜನೇಯನ ಗುಡಿಯಲ್ಲಿರುವ ಶಾಸನವು ಮುಂಮಡಿ ಬಸಪ್ಪನಾಯಕನದು. ಈ ಶಾಸನದ ಪಾಠವು ಪೂರ್ಣವಾಗಿ ಲಭ್ಯವಿಲ್ಲ. ಈಗ ಲಭ್ಯವಿರುವ ಪಾಠವನ್ನು ಕೆಳಗೆ ಕೊಡಲಾಗಿದೆ.

ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕವರುಷಂ
ಗಳು ೧೬೨೨ ನೆಯ ವಿಕ್ರಮ ಸಂವತ್ಸರದ
ಆಶ್ವಿಜ ಶುದ್ಧ ೧ ಲು ಮುಂಮಡಿ ಬಸಪ್ಪ ನಾಯಕೈಯ್ಯನವರು
ಹನುಮಂಥ ದೇವರ……………………….
ಮೈದೂರು……………………

ಈ ಅಪ್ರಕಟಿತ ಶಾಸನದಲ್ಲಿ ಒಟ್ಟು ಹದಿನೈದು ಸಾಲುಗಳಿವೆ. ದೊರೆತಿರುವ ಪಾಠದಲ್ಲಿ ಕ್ರಿ.ಶ. ೧೭೦೦ ರಲ್ಲಿ ಮುಮ್ಮಡಿ ಬಸಪ್ಪ ನಾಯಕನು ಹನುಮಂತ ದೇವರ ಗುಡಿಗೆ ಎಂಬುವುದು ಮಾತ್ರ ಇದೆ. ದೇವಾಲಯಕ್ಕೆ ಏನಾದರೂ ಮಾಡಿಸಿರಬಹುದೇ? ಅಥವಾ ಕೋಟೆ ಕಟ್ಟಿಸಿದ ಉಲ್ಲೇಖವಿದೆಯೇ? ಏನೂ ತಿಳಿಯದು ಆದರೆ ಮುಮ್ಮಡಿ ಬಸಪ್ಪ ನಾಯಕನು ಈ ರೀತಿಯ ದೇವಾಲಯಗಳಿಗೆ ದಾನ - ದತ್ತಿ ನೀಡಿದಂತೆ ಉಲ್ಲೆಖಿಸುವ ಹಲವಾರು ಶಾಸನಗಳಿವೆ. ಕೆಲವನ್ನು ಉದಾಹರಣೆಗಾಗಿ ಇಲ್ಲಿ ನೀಡಲಾಗಿದೆ.

ಮುಂಮಡಿ ಬಸಪ್ಪ ನಾಯಕನ ಕ್ರಿ.ಶ. ೧೭೦೮ರ ಶಾಸನವು[3] ಉಚ್ಚಂಗೆಮ್ಮ ದೇವಾಲಯದ ಗಂಟೆಯ ಮೇಲಿದೆ. ಇದು ಈ ನಾಯಕ ಗಂಟೆಯನ್ನು ಸಮರ್ಪಿಸಿದಂತೆ ತಿಳಿಸುತ್ತದೆ. ಅಲ್ಲೇ ಇನ್ನೊಂದು ಗಂಟೆಯಲ್ಲಿ ಕ್ರಿ.ಶ. ೧೭೦೦ರಲ್ಲಿ ಮುಂಮಡಿ ಬಸಪ್ಪ ನಾಯಕನು ಇನ್ನೊಂದು ಗಂಟೆಯನ್ನು ಉಲ್ಲೇಖವಿದೆ.[4] ಕ್ರಿ.ಶ. ೧೭೩೪ರ ಶಾಸನದಲ್ಲಿ ಮುಂಮಡಿ ಬಸಪ್ಪ ನಾಯಕರು ಕೊಟ್ಟೂರು ಬಸವೇಶ್ವರ ದೇವಸ್ಥಾನದಲ್ಲಿ ನಡೆಯುವ ದಾಸೋಹಕ್ಕೆ ಕಂನಾಯಕನಕಟ್ಟೆ ಗ್ರಾಮವನ್ನು ದತ್ತಿಯಾಗಿ ನೀಡಿದ ಉಲ್ಲೇಖವಿದೆ.[5] ಈ ಮೇಲಿನ ಯಾವ ಶಾಸನಗಳಲ್ಲಿಯೂ ಕರಡಿದುರ್ಗದ ಕೋಟೆಯ ಪ್ರಸ್ತಾಪ ಬಂದಿಲ್ಲ. ಆದರೆ ಈತನ ಆಡಳಿತಾವಧಿಯಲ್ಲಿ ಅನೇಕ ಕೋಟೆಗಳನ್ನು ಗೆದ್ದು ಹರಪನಹಳ್ಳಿ ಸೀಮೆಯನ್ನು ವಿಸ್ತರಿಸಿದ್ದನಲ್ಲದೆ ೪೭೦ ಕಂದಾಯದ ಹಳ್ಳಿಗಳನ್ನು ತನ್ನ ವ್ಯಾಪ್ತಿಯಲ್ಲಿಟ್ಟುಕೊಂಡಿದ್ದ.**೬** ಈ ವ್ಯಾಪ್ತಿಗೆ ಗಡಿಗಳಾಗಿ ಪಶ್ಚಿಮಕ್ಕೆ ಹಿರೇಕುರುವತ್ತಿ, ಮೈಲಾರ, ಉತ್ತರಕ್ಕೆ ನಾರಾಯಣದೇವರ ಕೆರೆ, ದಕ್ಷಣಕ್ಕೆ ಉಚ್ಚಂಗಿದುರ್ಗ ಮತ್ತು ಕರಡಿದುರ್ಗಗಳಾಗಿದ್ದವು. ದಕ್ಷಿಣದ ರಾಜ್ಯದ ರಕ್ಷಣೆಗಾಗಿ ಹಾಗೂ ವಿಸ್ತರಣೆಗಾಗಿ ಕರಡಿದುರ್ಗದಲ್ಲಿ ತನ್ನ ಸೈನ್ಯದ ತುಕಡಿಯನ್ನು ಇಡುವುದಕ್ಕಾಗಿ ಮುಂಮಡಿ ಬಸಪ್ಪ ನಾಯಕನು ಕೋಟೆಯನ್ನು ಕಟ್ಟಿಸಿರಬಹುದು.

**ಕೋಟೆಯ ಲಕ್ಷಣಗಳು**

ಕರಡಿದಗುರ್ಗದ ಬೆಟ್ಟವು ಸುತ್ತಲೂ ಕಿರಿದಾದ ಕಂದಕವನ್ನು ಹೊಂದಿ ಕೊಡದ ರೂಪದಲ್ಲಿದೆ. ಈ ಬೆಟ್ಟವನ್ನು ಬಳಸಿ ಕೋಟೆಯನ್ನು ಕಟ್ಟಲಾಗಿದೆ. ಈ ಗಿರಿದುರ್ಗವು ಆಕಾರದಲ್ಲಿ ಬಹು ಚಿಕ್ಕದಿದ್ದರೂ ಬಲಿಷ್ಠವಾಗಿರುವುದು. ಈ ಭಾಗವೆಲ್ಲವೂ ಬೆಟ್ಟ - ಗುಡ್ಡಗಳಿಂದ ಸುತ್ತವರೆದಿದ್ದು, ಪ್ರಕೃತಿದತ್ತವಾದ ಕಂದಕಗಳಿರುವುದರಿಂದಲೇ ಈ ಕೋಟೆ ಬಲಿಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಈ ಸ್ಥಳವನ್ನು ಕೋಟೆ ಕಟ್ಟಲು ಆಯ್ಕೆ ಮಾಡಿಕೊಂಡಿರಬೇಕು.

ಈ ಕೋಟೆಗೆ ದಕ್ಷಿಣ (ಗ್ರಾಮ ಇರುವ ದಿಕ್ಕಿನಿಂದ) ಪ್ರವೇಸವಿದೆ. ಇದೇ ಮುಖ್ಯದ್ವಾರ. ಸ್ವಲ್ಪ ಶಿಥಿಲವಾಗಿದೆ. ಇದರ ಎರಡೂ ಬದಿಗೆ ೩೦ ರಿಂದ ೪೦ ಅಡಿ ಎತ್ತರವಿರುವ ವೃತ್ತಾಕಾರದ ಕೊತ್ತಳಗಳಿವೆ. ಪ್ರವೇಶದ್ವಾರದ ಎದುರಿಗೆ ಆಂಜನೇಯರ ದೇಗುಲವಿರುವುದು. ಇದರ ಹಿಂಭಾಗದಲ್ಲಿ ನೂರಾರು ವಾಸದ ಮನೆಗಳು ಗುಂಪು ಗುಂಪಾಗಿದೆ. ಚೌಕಾಕಾರದಲ್ಲಿ ನಿರ್ಮಿಸದ ಕೆಲವು ಮನೆಗಳಿಗೆ ನಾಲ್ಕು, ಇನ್ನು ಕೆಲವು ಮನೆಗಳಿಗೆ ಐದು, ಚಿಕ್ಕ ಮನೆಗಳಿಗೆ ಎರಡು ಕೋಣೆಗಳಿವೆ. ಕೋಣೆಗಳ ಗೋಡೆಗಳಲ್ಲಿ ಚಿಕ್ಕ ಚಿಕ್ಕ ಗೂಡುಗಳಿವೆ. ಇವುಗಳನ್ನು ಮನೆ ಬಳಕೆಯ ವಸ್ತುಗಳನ್ನಿಡುವುದಕ್ಕಾಗಿ ಮಾಡಿರಬಹುದು. ಮುಖ್ಯವಾಗಿ ಕೋಷ್ಠಕದಲ್ಲಿ ದೇವರನ್ನು ಇಟ್ಟು ಪೂಜಿಸುವುದಕ್ಕಾಗಿ ನಿರ್ಮಿಸಿದ್ದರು. ಕೋಣೆಗಳ ಮುಂಭಾಗದಲ್ಲಿ ಹಜಾರ ಅಥವಾ ಪಡಸಾಲೆಗಳಿವೆ. ಕೋಟೆ ತುಂಬಾ ಕಿರಿದಾಗಿದ್ದು ಇದರ ತುಂಬಾ ಮನೆಗಳಿರುವುದರಿಂದ ವಿಶಾಲವಾದ ಬೀದಿಗಳಿಲ್ಲ. ಮನೆಗಳನ್ನು ಬಹಳ ಹತ್ತಿರ ಹತ್ತಿರವಾಗಿ ನಿರ್ಮಿಸಿದ್ದು, ಓಡಾಡಲು ಐದು ಅಡಿಗಳಷ್ಟು ಸ್ಥಳವನ್ನು ಮಾತ್ರ ಬಿಡಲಾಗಿದೆ. ಅಲ್ಲಿಯೇ ಹೇರಳವಾಗಿ ದೊರೆಯುವ ಕಣಶಿಲೆಯಿಂದ ಈ ಮನೆಗಳನ್ನು ನಿರ್ಮಿಸಲಾಗಿದೆ. ಇವುಗಳ ಛಾವಣಿಗಳು ಮಾತ್ರ ಉಳಿದಿಲ್ಲ. ಈ ಮನೆಗಳ ಮಧ್ಯದಲ್ಲಿ ಅಲ್ಲಲ್ಲಿ ದವಸ ಧಾನ್ಯಗಳನ್ನು ಸಂಗ್ರಹಿಸುವುದಕ್ಕಾಗಿ ಉಗ್ರಾಣಗಳನ್ನು ಕಣಜಗಳನ್ನು ನಿರ್ಮಿಸಲಾಗಿದೆ. ಇವುಗಳನ್ನು ಮಧ್ಯಮ ಗಾತ್ರದ ಕಲ್ಲು ಮತ್ತು ಮಣ್ಣಿನಿಂದ ಕಟ್ಟಲಾಗಿದೆ. ಕೆಲವು ವರ್ತುಲಾಕಾರ ಮತ್ತು ಕೆಲವು ಆಯತಾಕಾರವನ್ನು ಹೊಂದಿದೆ.

ಕೋಟೆಯ ಮಧ್ಯಭಾಗದಲ್ಲಿ ಸುಮಾರು ೫೦ ಅಡಿ ಎತ್ತರದ ಬೃಹದಾಕಾರದ ಕೊತ್ತಳವಿದೆ. ಇದು ಸುಮಾರು ೫೦ ಅಡಿ ಸುತ್ತಳತೆಯನ್ನು ಹೊಂದಿದೆ. ಇದರ ಮೇಲ್ತುದಿಗೆ ಹೋಗಲು ಮೆಟ್ಟಿಲುಗಳಿವೆ. ಈ ಕೊತ್ತಳದ ಮೇಲ್ಭಾಗದಿಂದ ನೋಡಿದರೆ ಸಂಪೂರ್ಣ ಕೋಟೆ ಭಾಗವಲ್ಲದೆ ಗುಡ್ಡದ ಸುತ್ತಲಿನ ಪರಿಸರವೆಲ್ಲವೂ ಗೋಚರಿಸುತ್ತದೆ. ಕೋಟೆಯ ಆಯಕಟ್ಟಿನ ಸ್ಥಳಗಳಲ್ಲಿ ಕೊತ್ತಳಗಳನ್ನು ನಿರ್ಮಿಸಲಾಗಿದೆ.

ಕೋಟೆಯ ಗೋಡೆಯು ಸರಾಸರಿ ೧೫ ಅಡಿ ಎತ್ತರವಾಗಿದೆ. ಕೆಲವು ಕಡೆ ಹೆಚ್ಚು ಕಡಿಮೆ ಇದೆ. ಇದು ಸರಾಸರಿ ೨ ರಿಂದ ೪ ಅಡಿಗಳವರೆಗೆ ಅಗಲವಾಗಿದೆ. ಕೋಟೆಯ ಗೋಡೆಯು ತಳಪಾಯವಿಲ್ಲದೆ ಹಾಸುಬಂಡೆಯ ಮೇಲೆ ನಿಂತಿದೆ. ಇದನ್ನು ಕೆಳಭಾಗದಲ್ಲಿ

ಆಯತಾಕಾರದ ಕಲ್ಲುಗಳನ್ನು ಬಳಸಿ, ಮೇಲ್ಭಾಗದಲ್ಲಿ ಮಧ್ಯಮ ಗಾತ್ರದ ಕಲ್ಲುಗಳಿಂದ ಕಟ್ಟಲಾಗಿದೆ. ಈ ಗೋಡೆಯ ಸುತ್ತಲೂ ಮೇಲ್ಭಾಗದಲ್ಲಿ ಬಂದೂಕು ಕಿಂಡಿಗಳಿವೆ.

**ಕೋಟೆಯಲ್ಲಿ ನೀರು ಪೂರೈಕೆ**

ಕೋಟೆಯಲ್ಲಿ ಕುಡಿಯುವ ನೀರಿಗೆ ಈ ಪಾಳೆಯಗಾರರು ಸಾಕಷ್ಟು ಗಮನಹರಿಸಿರುವುದು ಕಂಡುಬಂದಿದೆ. ಬಂಡೆಗಳ ಸಂದುಗಳಿಗೆ ಗೋಡೆಗಳನ್ನು ಕಟ್ಟಿ ಮಳೆಯ ನೀರನ್ನು ಸಂಗ್ರಹಿಸಲಾಗುತ್ತಿತ್ತು. ಇಂತಹ ಮಳೆಯ ನೀರಿನ ಸಂಗ್ರಹದ ಹೊಂಡಗಳು ಇಂದಿಗೂ ಇವೆ.

**ಕೋಟೆಯಲ್ಲಿರುವ ದೇವಾಲಯ**

ಕೋಟೆಯ ಪ್ರವೇಶದ ಎದುರು ಭಾಗದಲ್ಲಿಯೇ ಆಂಜನೇಯ ದೇವಾಲಯ. ಇದು ಗರ್ಭಗೃಹ, ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ೬ ಅಡಿ ಎತ್ತರದ ಆಂಜನೇಯನ ಉಬ್ಬು ಶಿಲ್ಪವಿದೆ. ಪಾಳೆಯಗಾರರ ಆರಾಧ್ಯದೇವ ಇಂದಿಗೂ ದೊಡ್ಡ ಪ್ರಮಾಣದಲ್ಲಿ ಪೂಜೆ, ಜಾತ್ರೆ ಜರುಗುತ್ತವೆ. ಇಲ್ಲಿ ಪ್ರತಿ ಅಮಾವಾಸ್ಯೆ ಮತ್ತು ಹುಣ್ಣಿಮೆ ದಿನಗಳಲ್ಲಿ ದೇವರ ಹೇಳಿಕೆ. ನಡೆಯುತ್ತದೆ. ಅದಕ್ಕಾಗಿ ನೂರಾರು ಭಕ್ತರೂ ದೂರ ದೂರದ ಸ್ಥಳಗಳಿಂದ ಬರುತ್ತಾರೆ. ಇಂದಿಗೂ ಕರಡಿದುರ್ಗದ ಆಂಜನೇಯನೆಂದರೆ ಬಹಳ ಖ್ಯಾತಿ. ಈ ದೇವಾಲಯದ ಸಭಾಮಂಟಪದಲ್ಲಿರುವ ಮುಂಮಡಿ ಬಸಪ್ಪ ನಾಯಕನ ಶಾಸನಕ್ಕೂ ಎಣ್ಣೆ ಅಭಿಷೇಕ ನಡೆಯುತ್ತದೆ.

**ಸಮೀಕ್ಷೆ**

ಕರಡಿದುರ್ಗದ ಕೋಟೆಯು ಉಚ್ಚಂಗಿ ದುರ್ಗದ ಕೋಟೆಗೆ ಬಹು ಸಮೀಪವಿದೆ. ಉಚ್ಚಂಗಿದುರ್ಗದ ಪಶ್ಚಿಮ ದಿಕ್ಕಿನಲ್ಲಿರುವ ಹರಿಹರದ ಬಾಗಿಲು ಕರಡಿದುರ್ಗದ ಕಡೆಯಿಂದ ಬರುವವರೆಗೆ ಬಹು ಸಮೀಪದ ಮಾರ್ಗವಾಗಿದೆ. ಹರಿಹರದ ಬಾಗಿಲಿನಿಂದ ಇಳಿದು ಪಶ್ಚಿಮಕ್ಕೆ ಸಣ್ಣ, ಬೆಟ್ಟಗಳನ್ನು ದಾಟಿಕೊಂಡು ಕರಡಿದುರ್ಗದವರೆಗೆ ನಡೆದುಕೊಂಡು ಹೋಗುವುದಕ್ಕೆ ಅಂದಿನ ಕಾಲದಲ್ಲಿ (ಪಾಳೆಯಗಾರರ) ನಿರ್ಮಿಸಿದ ದಾರಿ ಇದೆ. ಇದರ ಮೂಲಕ ಗದ್ದೆಗಳ ಬಯಲಿನಿಂದ ಕರಡಿದುರ್ಗದ ಕೆಳಭಾಗಕ್ಕೆ ಬಂದರೆ ಕೋಟೆಯೊಳಗೆ ಹೋಗಲು ಸಹಾಯಕವಾಗುವಂತೆ ಸವೆದ ಕಲ್ಲುಹಾಸಿನ ದಾರಿ ಕಂಡುಬರುತ್ತದೆ. ಉಚ್ಚಂಗಿದುರ್ಗದ ಕೋಟೆಗಿಂತ ಇದು ಬಹು ಚಿಕ್ಕದು. ಉಚ್ಚಂಗಿದುರ್ಗದ ಕೋಟೆಯನ್ನು ಜೀರ್ಣೋದ್ಧಾರ ಮಾಡಿಕೊಂಡು ಹರಪನಹಳ್ಳಿ ಪಾಳೆಯಗಾರರು ಆಳ್ವಿಕೆ ಮಾಡಿದರು. ಇಂತಹ ಐದು ಸುತ್ತಿನ ಬಹುದೊಡ್ಡ ಕೋಟೆ ಇದ್ದರೂ ಇದಕ್ಕೆ ಸಮೀಪದಲ್ಲಿಯೇ ಇನ್ನೊಂದು ಚಿಕ್ಕ ಕೋಟೆಯನ್ನು ಕಟ್ಟುವ ಉದ್ದೇಶವಾದರೂ ಏನಿತ್ತು?

ಉಚ್ಚಂಗಿದುರ್ಗದಿಮದ ಇಲ್ಲಿಗೆ ಪ್ರತ್ಯೇಕ ದಾರಿಯೆ ಇರುವುದರಿಂದ ಇವರೆಡು ದುರ್ಗಗಳ ಮಧ್ಯೆ ಇದ್ದಿರಬಹುದಾದ ಸಂಬಂಧವೂ ಖಚಿತವಾಗುತ್ತದೆ. ಉಚ್ಚಂಗಿದುರ್ಗದ ಮೇಲೆ ಶತ್ರುಗಳು ಆಕ್ರಮಿಸಿದಾಗ ಸಹಾಯವಾಗಲೆಂದೇ ಸೈನ್ಯದ ಒಂದು ತುಕಡಿಯನ್ನು ಗುಪ್ತವಾಗಿ ಇಡುವುದಕ್ಕಾಗಿಯೇ ಕರಡಿದುರ್ಗದ ಕೋಟೆಯನ್ನು ಹರಪನಹಳ್ಳಿ ಪಾಳೆಯಗಾರರು ನಿರ್ಮಿಸಿರಬೇಕು. ಅಥವಾ ಅರಸರ ಪರಿವಾರದವರು, ಸೈನಿಕರು, ಉನ್ನತವರ್ಗದವರು ವಾಸಿಸಲೆಂದೇ ಈ ಕೋಟೆ ಕಟ್ಟಿರಬೇಕು. ಈ ಹಿನ್ನೆಲೆಯಲ್ಲಿ ಪಾಳೆಯಗಾರರ ಕಾಲದ ಸಾಮಾಜಿಕ ಮತ್ತು ಆರ್ಥಿಕ ಚಿತ್ರಣವನ್ನು ಅರಿಯಲು ಈ ಕೋಟೆ ಬಹಳ ಮಹತ್ವದ್ದು. ಒಟ್ಟಿನಲ್ಲಿ ಕರಡಿದುರ್ಗವನ್ನು ಪರಿಶೀಲಿಸಿದಾಗ ಅಲ್ಲಿನ ಕೋಟೆ - ಕೊತ್ತಳಗಳು, ವಸತಿಗೃಹಗಳಿಂದ ಮಧ್ಯಯುಗೀನ ಕಾಲದ ಅಚ್ಚುಕಟ್ಟಾದ ಮನೆಗಳು ಹೇಗಿದ್ದವೆಂಬುದು ತಿಳಿದುಕೊಳ್ಳಬಹುದು. ಆದೂ ಅಲ್ಲದೇ ವಿಜಯನಗರ ಕಾಲದ ವಸತಿಗೃಹಗಳನ್ನು ಅಥವಾ ಪಾಳೆಯಗಾರರ ಕಾಲದ ಮನೆಗಳನ್ನು ಅಧ್ಯಯನ ಮಾಡುವವರಿಗೆ ಕರಡಿದುರ್ಗವು ಒಂದು ಅತ್ಯುತ್ತಮವಾದ ಆಕರವಾಗಬಲ್ಲದು.

---

**(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

[1] ಸೂರ್ಯನಾಥ, ಯು.ಕಾಮತ್ (ಸಂ.), ೧೯೮೭.ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ - ೩, ಬೆಂಗಳೂರು, ಗ್ಯಾಸೆಟಿಯರ್ ಇಲಾಖೆ.

[2] ಕರಡಿದುರ್ಗದ ಆಂಜನೇಯ ದೇವಾಲಯದ ಸಭಾಮಂಟಪದಲ್ಲಿರುವ ಶಾಸನ (ಅಪ್ರಕಟಿತ)ದಲ್ಲಿ ಹಾಗೂ ಕೋಟೆಯಲ್ಲಿರುವ ವಾಸದ ಮನೆಗಳು

[3] ದೇವರಕೊಂಡಾರೆಡ್ಡಿ ಮತ್ತು ಇತರರು, ೧೯೯೮, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ) - ೧, ಪು.೪೭೩. ಹಂಪಿ : ಕನ್ನಡ ವಿಶ್ವವಿದ್ಯಾಲಯ

[4] ಅದೇ, ಪು. ೪೭೪

[5] ಸದಾಶಿವಪ್ಪ, ಕುಂ.ಬಾ. ೧೯೯೬, ಹರಪನಹಳ್ಳಿ ಪಾಳೆಯಗಾರರು, ಪು. ೧೦೭. ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು

# ೩. ಬಂಡ್ರಿ

ಹರಪನಹಳ್ಳಿ ತಾಲೂಕಿನಲ್ಲಿರುವ ಬಂಡ್ರಿಯು ಹರಪನಹಳ್ಳಿಯಿಂದ ಹಡಗಲಿಗೆ ಹೋಗುವ ದಾರಿ ಮಧ್ಯದಲ್ಲಿ ೯ ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ವಾಯುವ್ಯ ದಿಕ್ಕಿಗಿರುವ ಬೆಟ್ಟದ ಮೇಲೆ ಕೋಟೆ ಇದೆ.

ಹರಪನಹಳ್ಳಿ ಪಾಳೆಯಗಾರರು ತಮ್ಮ ಸೈನ್ಯದ ತುಕಡಿಗಳನ್ನು ಇಡುವುದಕ್ಕಾಗಿ ಕೆಲವು ಆಯಾಕಟ್ಟಿನ ಸ್ಥಳಗಳಲ್ಲಿ ಕೋಟೆಗಳನ್ನು ನಿರ್ಮಿಸಿದ್ದರು. ಅವುಗಳಲ್ಲಿ ಈ ಬಂಡ್ರಿಯ ಕೋಟೆಯು ಒಂದು. ಇದುವರೆಗೆ ಬೆಳಕಿಗೆ ಬಾರದ ಹಾಗೂ ವ್ಯವಸ್ಥಿತವಾಗಿ ನಿರ್ಮಾಣವಾಗಿರುವ ಕೋಟೆಗಳ ಸಾಲಿಗೆ ಇದು ಸೇರ್ಪಡೆಯಾಗುತ್ತದೆ. ಸ್ಥಳೀಯರು ಕೋಟೆಯನ್ನು ಒಳಗೊಂಡ ಬೆಟ್ಟವನ್ನು ಹೆಸರಿಸುತ್ತಿರುವುದು ಬಂಡ್ರಿ ಎಂದು. ಕನ್ನಡ ನಿಘಂಟುವಿನಲ್ಲಿ ಬಂಡೆ ಎಂದರೆ ಹಾಸುಗಲ್ಲು, ದೊಡ್ಡಕಲ್ಲು, ದೊಡ್ಡ, ಅಡೆ ತಡೆ ಎಂಬಿತ್ಯಾದಿ ಅರ್ಥಗಳಿವೆ. ಈ ಗ್ರಾಮವನ್ನು ಸೇರಿದಂತೆ ಕೋಟೆಯ ಬೃಹದಾಕಾರದ ಹಾಸುಬಂಡೆಯ ಮೇಲಿದೆ. ಬಂಡೆ ಜನರ ಆಡುಭಾಷೆಯಲ್ಲಿ ಬಂಡ್ರಿ, ಬಂಡ್ರಿಯಾಗಿದೆ.

**ಕೋಟೆಯ ನಿರ್ಮಾಣ**

ಬಂಡ್ರಿಯ ಕೋಟೆಯನ್ನು ಗೋಣಿ ಬಸಪ್ಪ ಮತ್ತು ಚಿಗಟೇರಿ ಶಿವಪ್ಪನಾಯಕರು ಸೇರಿ ನಿರ್ಮಿಸಿದರೆಂದು ಪ್ರತೀತಿ. ಚಿಗಟೇರಿ ಶಿವಪ್ಪನಾಯಕ ಬಂಡ್ರಿಗೆ ಆಗಾಗ ಬಂದು ಹೋಗುತ್ತಿದ್ದ. ಈ ಕಾರಣವಾಗಿಯೇ ಕೂಲಹಳ್ಳಿಯ ಗೋಣಿ ಬಸಪ್ಪ ಹಾಗೂ ಶಿವಪ್ಪನಾಯಕರ ಮಧ್ಯೆ ಸಂಬಂಧ ಬೆಳೆಯಿತು. ಇವರ ನೆನಪಿಗಾಗಿ ಅವರು ಕಟ್ಟಿಸಿದ ಕೋಟೆ ಮಾತ್ರ ಉಳಿದುಕೊಂಡಿದೆ ಎಂಬುದು ಗ್ರಾಮದ ಹಿರಿಯರ ಹೇಳಿಕೆಯಾಗಿದೆ.

ಕೂಲಹಳ್ಳಿ ಗೋಣಿ ಬಸವೇಶ್ವರನ ಜಾತ್ರೆಯ ಪ್ರತಿವರ್ಷ ಮಾರ್ಚ್ ತಿಂಗಳಲ್ಲಿ ಜರುಗುತ್ತದೆ. ಇದರಲ್ಲಿ ಶ್ರೀ ಗೋಣಿ ಬಸವೇಶ್ವರನನ್ನು ಕ್ರೂರವಾಗಿ ನಡೆಸಿಕೊಳ್ಳುವ ಪ್ರಸಂಗಗಳಿವೆ. ಬಂಡ್ರಿ ಗ್ರಾಮಸ್ಥರ ಹೇಳಿಕೆಗೂ ಮತ್ತು ಈ ಮೇಲಿನ ಪ್ರಸಂಗಕ್ಕೂ ಪರಸ್ಪರ ವಿರುದ್ಧವಾಗಿದೆ. ಗೋಣಿ ಬಸವೇಶ್ವರ ಯಾರು, ಎಲ್ಲಿಂದ ಬಂದ ಏಕೆ ಬಂದ, ಈತನ ಕಾಲಾವಧಿ ಏನು ಈತನ ಜೀವನ ಹೇಗಿತ್ತು ಇತ್ಯಾದಿಗಳ ಬಗ್ಗೆ ಸರಿಯಾದ ದಾಖಲೆಗಳಿಲ್ಲ.

ಲಭ್ಯವಿರುವ ಕೆಲವು ದಾಖಲೆಗಳು, ಸ್ಮಾರಕಾವಶೇಷಗಳು ಮತ್ತು ಭೌಗೋಳಿಕ ಹಿನ್ನೆಲೆಯಲ್ಲಿ ಆಧಾರವಾಗಿಟ್ಟುಕೊಂಡು ಈ ಕೋಟೆಯ ನಿರ್ಮಾಣ ಮತ್ತು ರಚನೆಯನ್ನು ಊಹಿಸಲಾಗಿದೆ.

ಗೋಡೆಯೂ ಸರಾಸರಿ ೧೫ ರಿಂದ ೧೮ ಅಡಿ ಎತ್ತರವಾಗಿದ್ದರೂ, ಕೆಲವು ಕಡೆ ಹೆಚ್ಚು ಕಡಿಮೆ ಇದೆ. ಇದರ ಅಗಲ ಸುಮಾರು ೨ ರಿಂದ ೩ ಅಡಿಗಳಾಗಿದ್ದು ಇನ್ನು ಹಲವಡೆ ಹೆಚ್ಚು ಕಡಿಮೆ ಇದೆ. ಕೋಟೆಯ ಗೋಡೆಯ ಕೆಳಭಾಗದಲ್ಲಿ ಸ್ಥಳೀಯವಾಗಿ ದೊರೆಯುವ ಮಧ್ಯಮ ಗಾತ್ರದ ಕಣಶಿಲೆಯಲ್ಲಿ ಬಳಸಿದ್ದು, ಮೇಲ್ಭಾಗದಲ್ಲಿ ಈ ಶಿಲೆಯಗಾತ್ರ ಚಿಕ್ಕದಾಗಿದೆ. ಮೆಲ್ತುದಿಯಲ್ಲಿ ಬಂದೂಕು ಕಿಂಡಿಗಳಿದ್ದು ಅವುಗಳಿಗೆ ಗಾರೆಯ ಲೇಪನ ಮಾಡಲಾಗಿದೆ. ಈ ಕೋಟೆಯ ಆಯಾ ಕಟ್ಟಿನ ಸ್ಥಳಗಳಲ್ಲಿ ಒಟ್ಟು ೧೨ ಕೊತ್ತಳಗಳಿದ್ದವೆಂದು ಸ್ಥಳೀಯರು ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಪೂರಕವಾಗಿ ಮೂರು ಕೊತ್ತಳಗಳು, ಒಂದು ಕೋಟೆಯ ಮಧ್ಯಭಾಗದಲ್ಲಿ ಎತ್ತರಸ್ಥಳದಲ್ಲಿದೆ. ಇದು ವೃತ್ತಾಕಾರವಾಗಿದ್ದು, ಸುಮಾರು ೫೦ ಅಡಿ ಸುತ್ತಳತೆ ಹಾಗೂ ೧೫ ಅಡಿ ಎತ್ತರವಾಗಿದ್ದು, ಮೇಲ್ಭಾಗದಲ್ಲಿ ಬಂದೂಕು ಕಿಂಡಿಗಳು ಮತ್ತು ಕೊತ್ತಳದ ಮೇಲೆರಲು ವ್ಯವಸ್ಥೆ ಮಾಡಲಾಗಿದೆ. ಇದನ್ನು ಸ್ಥಳೀಯರು ಕರಡಿ ಹುಡೇವು ಎನ್ನುತ್ತಾರೆ. ಉಳಿದ ಕೊತ್ತಳಗಳು ಭಾಗಶಃ ಹಾಳಾಗಿವೆ.

ಹಿಂದೆ ಬಂಡ್ರಿ ಗ್ರಾಮವು ಕೋಟೆಯೊಳಗೆ ಇತ್ತು. ಅಲ್ಲಿ ಆನೆಹೊಂಡ, ದೊಡ್ಡ ಹೊಂಡ, ತುಪ್ಪದ ಕೊಳ, ಕುಂಬಾರರ ಹಾವಗಿ ಮತ್ತು ನುಪ್ಪಣ್ಣನ ಗದ್ದುಗೆಗಳಿದ್ದವೆಂದು ಸುಮಾರು ೮೦ ವರ್ಷದ ವೃದ್ಧ ಬಣಕಾರ ತಿಂದಪ್ಪ ನೆನಪು ಮಾಡಿಕೊಳ್ಳುತ್ತಾರೆ. ಈಗ ಅವೆಲ್ಲ ನಾಶವಾಗಿವೆ. ಸರಕಾರವೇ ಕೋಟೆಯೊಳಗಿನ ಕಲ್ಲು ಗುಡ್ಡಗಳನ್ನು ಗುತ್ತಿಗೆದಾರರಿಗೆ ನೀಡಿದೆ ಎಂಬ ತಮ್ಮ ಮನದಾಳದ ಆಳಲನ್ನು ನಮ್ಮುಂದೆ ಹೇಳಿಕೊಳ್ಳುವರು.

**ಕೋಟೆಯಲ್ಲಿರುವ ದೇವಾಲಯಗಳು**

ಊರಿಗೊಂದು ಆಂಜನೇಯನ ಗುಡಿಗಳಿರುವುದು ಸರ್ವ ಸಾಮಾನ್ಯವಾಗಿದೆ. ಹಾಗೆಯೇ ಪ್ರತಿ ಕೋಟೆಗೊಂದು ಆಂಜನೇಯನ ದೇಗುಲಗಳಿರುವುದು ವಿಶೇಷವೇನಲ್ಲ. ಈ ದೇವಾಲಯವು ದಕ್ಷಿಣಾಭಿಮುಖವಾಗಿದ್ದು, ಎತ್ತರ ಸ್ಥಳದಲ್ಲಿದೆ. ಒಳಗೆ ಗರ್ಭಗೃಹ ಹಾಗೂ ಸಭಾಮಂಟಪಗಳಿವೆ. ಗರ್ಭಗೃಹದಲ್ಲಿ ಆಂಜನೇಯನ ಉಬ್ಬುಶಿಲ್ಪವಿದೆ. ಸಭಾಮಂಟಪ ಈಗ ಗೋಚರಿಸದು. ಕೋಟೆಯ ನೈರುತ್ಯಕ್ಕೆ ನುಪ್ಪಿನಪ್ಪನ ಗುಡಿ ಇದೆ. ಇದು ಉತ್ತರಾಭಿಮುಖವಾಗಿದ್ದು, ಒಳಗಡೆ ಗದ್ದುಗೆಯನ್ನು ಹೊಂದಿದೆ. ಇದರ ಹತ್ತಿರದಲ್ಲಿಯೇ ದಾದಣ್ಣ ಮತ್ತು ರಂಗಣ್ಣರ ಚಿಕ್ಕ ಚಿಕ್ಕ ಗುಡಿಗಳಿವೆ. ಈ ಕೋಟೆಯ ಬೆಟ್ಟಕ್ಕೆ ಸಮಾನ ಎತ್ತರದಲ್ಲಿರುವ ಇನ್ನೊಂದರಲ್ಲಿ ಬಂಡಿ ಬಸಪ್ಪನ ದೇಗುಲವಿದೆ. ಉತ್ತರಾಭಿಮುಖವಾಗಿರುವ ಇದರಲ್ಲಿ ಗರ್ಭಗೃಹ, ಸಭಾಮಂಟಪಗಳಿವೆ. ಗರ್ಭಗೃಹದಲ್ಲಿ ನಂದಿಯ ಶಿಲ್ಪವಿದೆ. ಸಭಾಮಂಟಪದಲ್ಲಿ ವಿಜಯನಗರೋತ್ತರ ಕಾಲದ ೪ ಕಂಬಗಳಿವೆ. ಪ್ರತಿವರ್ಷವೂ ಇಲ್ಲಿ ಜಾತ್ರೆ ಜರುಗುತ್ತದೆ.

**ಸಮೀಕ್ಷೆ**

ಒಟ್ಟಿನಲ್ಲಿ ಬಂಡ್ರಿ ಕೋಟೆಯ ಹರಪನಹಳ್ಳಿ ಪಾಳೆಯಗಾರರ ಅವಧಿಯಲ್ಲಿ ನಿರ್ಮಾಣಗೊಂಡಿದ್ದು, ಆಗ ಮಹತ್ವದ ಪಾತ್ರವನ್ನು ವಹಿಸಿತ್ತು. ಹರಪನಹಳ್ಳಿ ಪಾಳೆಯಗಾರರ ಹಲವು ಸೈನಿಕ ನೆಲೆಗಳಲ್ಲಿ ಒಂದು. ಹರಪನಹಳ್ಳಿ ಪಾಳೆಯಗಾರರ ರಾಜಕೀಯ, ಆರ್ಥಿಕ, ಸಾಮಾಜಿಕ ಇತಿಹಾಸವನ್ನು ತಿಳಿಯಲು ಈ ಕೋಟೆಯ ಬಹು ಉಪಯುಕ್ತವಾಗಿದೆ.

**ಟಿಪ್ಪಣಿಗಳು**

೧. ಗಿರಿಜ, ಟಿ ೨೦೦೧. ದಾವಣಗೇರಿ ಜಿಲ್ಲಾ ದರ್ಶನ

೨. ಸದಾಶಿವಪ್ಪ, ಕು.ಬಾ. ೧೯೯೭. ಹರಪನಹಳ್ಳಿ ಪಾಳೆಯಗಾರರು, ಪು.೧೦೭.ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು

೩. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ಬಳ್ಳಾರಿ ಜಿಲ್ಲೆ ೧, ಪು.೪೭೪.ಹಂಪಿ: ಕನ್ನಡ ವಿಶ್ವವಿದ್ಯಾಲಯ
೪. ಸದಾಶಿವಪ್ಪ, ಕು.ಬಾ.೧೯೯೬. ಹರಪನಹಳ್ಳಿ ಪಾಳೆಯಗಾರರು, ಪು.೧೧೦. ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು
೫. ದೇವೀರಪ್ಪ, ಎಚ್.ಸಂ., ೧೯೯೪. ರಾಮನಾಥ ಚರಿತೆ ೨, ಪು.೩೭. ಮೈಸೂರು : ಮೈಸೂರು ವಿಶ್ವವಿದ್ಯಾಲಯ

# ೪. ಹರಪನಹಳ್ಳಿ

ಹರಪನಹಳ್ಳಿಯ ಬಳ್ಳಾರಿಗೆ ನೈರುತ್ಯಕ್ಕೆ ೧೨೭ ಕಿ.ಮೀ. ಬೆಂಗಳೂರಿಗೆ ೩೦೪ ಕಿ.ಮೀ. ದೂರದಲ್ಲಿದೆ. ಈಗ ದಾವಣಗೆರೆ ಜಿಲ್ಲೆಗೆ ಸೇರಿದ ತಾಲೂಕು ಕೇಂದ್ರವಾಗಿದೆ. ಹರಪನಹಳ್ಳಿ ಪಾಳೆಯಗಾರರಿಂದ ಈ ಪ್ರದೇಶವು ಪ್ರಸಿದ್ಧಿಗೆ ಬಂದು ಕ್ರಿ.ಶ.೧೬ನೆಯ ಶತಮಾನದಿಂದ ಕ್ರಿ.ಶ.೧೯ ಶತಮಾನದವರೆಗೆ ಅಂದರೆ ಮುಂದೆ ಬ್ರಿಟಿಷರ ವಶವಾಗುವವರೆಗೂ ಹರಪನಹಳ್ಳಿ ಪಾಳೆಯಗಾರರ ಬಲಿಷ್ಠ ಆಡಳಿತ ಕೇಂದ್ರವಾಗಿತ್ತು. ಪಾಳೆಯಗಾರರೇ ಇಲ್ಲೊಂದು ಕೋಟೆಯೊಂದನ್ನು ಕಟ್ಟಿಕೊಂಡಿದ್ದರು.

**ಇತಿಹಾಸ**

ವಿಜಯನಗರ ಅರಸ ಸಂತತಿ ಆನೆಗೊಂದಿ ಮತ್ತು ಚಂದ್ರಗಿರಿ ನೆಲೆವೀಡುಗಳಿಂದ ಸುಮಾರು ಒಂದು ಶತಮಾನಕ್ಕೂ ಹೆಚ್ಚುಕಾಲ ರಾಜ್ಯ ಭಾರ ಮಾಡಿದರು. ಈ ಅವಧಿಯಲ್ಲಿ ವಿಜಯನಗರದ ಅರಸರು ಹೆಸರಿಗೆ ಮಾತ್ರ ಅರಸರಾಗಿದ್ದರು. ಇವರ ಸೇನೆಯಲ್ಲಿ ಸೇವೆ ಸಲ್ಲಿಸಿದ ದಳವಾಯಿಗಳು, ಸರದಾರರು, ಕೆಲಸದವರು ಚಿಕ್ಕ ಚಿಕ್ಕ ಸ್ವತಂತ್ರ ರಾಜ್ಯಗಳನ್ನು ಸ್ಥಾಪಿಸಿದರು. ಅಂಥವುಗಳಲ್ಲಿ ಬಳ್ಳಾರಿ, ಸಂಡೂರು, ಗುಡೇಕೋಟೆ, ಜರಿಮಲೆ ಮತ್ತು ಹರಪನಹಳ್ಳಿ ಈ ಐದು ರಾಜ್ಯಗಳು ಸೇರಿದ್ದವು. ಇವುಗಳಲ್ಲಿ ಹರಪನಹಳ್ಳಿ ಪಾಳೆಯಪಟ್ಟು ಪ್ರಮುಖವಾದುದು.

ಹರಪನಹಳ್ಳಿಯು ಮೊದಲು ಅಗ್ರಹಾರವಾಗಿದ್ದರೂ, ಪ್ರಸಿದ್ಧಿಗೆ ಬಂದದ್ದು ಪಾಳೆಯಗಾರರ ಅವಧಿಯಲ್ಲಿ. ಹರಪನಹಳ್ಳಿ ಸಂಸ್ಥಾನವನ್ನು ಆಳಿದ ಪಾಳೆಯಗಾರರಲ್ಲಿ ದಾದಾನಾಯಕ, ಓಬಣ್ಣನಾಯಕ, ರಂಗಣ್ಣನಾಯಕ, ಮುಮ್ಮಡಿ ಬಸಪ್ಪನಾಯಕ, ವೀರಮುಮ್ಮಡಿನಾಯಕ, ಮೊದಲ ಹಾಗೂ ಎರಡನೆಯ ಸೋಮಶೇಖರ ನಾಯಕ, ಎರಡನೇ ವೀರಬಸಪ್ಪ ನಾಯಕರುಗಳು ಪ್ರಮುಖರಾಗಿದ್ದರು.

ಈ ಪಾಳೆಯಗಾರರು ನೆರೆಹೊರೆಯ ರಾಜ್ಯಗಳಾದ ಜರಿಮಲೆ, ಗುಡೇಕೋಟೆ, ರಾಯದುರ್ಗ, ತರೀಕರೆ ಮತ್ತು ಸವಣೂರು ಇವುಗಳೊಂದಿಗೆ ಉತ್ತಮ ಸಂಬಂಧವನ್ನು ಇಟ್ಟುಕೊಂಡಿದ್ದರು. ಇದಕ್ಕೆ ಪೂರಕವೆಂಬಂತೆ ಜರಿಮಲೆ, ಗುಡೇಕೋಟೆ ಮತ್ತು ತರೀಕೆರೆ ಪಾಳೆಯಗಾರರೊಂದಿಗೆ ವೈವಾಹಿಕ ಸಂಬಂಧಗಳು ಏರ್ಪಟ್ಟಿದ್ದವು.

ಹರಪನಹಳ್ಳಿಯವರು ಚಿತ್ರದುರ್ಗದ ಪಾಳೆಯಗಾರರೊಂದಿಗೆ ಆರಂಭದಲ್ಲಿ ಉತ್ತಮ ಸಂಬಂಧವನ್ನು ಹೊಂದಿದ್ದರು. ಇದಕ್ಕೆ ಸಾಕ್ಷಿ ಎಂಬಂತೆ ಹರಪನಹಳ್ಳಿ ದಾದನಾಯಕ ದುರ್ಗದ ತಿಮ್ಮಣ್ಣನಾಯಕರ ಮಗಳಾದ ಸಮತಟ್ಟಾದ ಸುಮಾರು ೩೦ ಎಕರೆ ಪ್ರದೇಶದಲ್ಲಿ ಕೋಟೆಯನ್ನು ಕಟ್ಟಿದೆ. ಇದರ ಸುತ್ತಲೂ ಕಡಿದಾದ ಕಂದಕಗಳಿದ್ದವು. ಕೋಟೆಗೆ ಮಧ್ಯಮ ಗಾತ್ರದ ಕಲ್ಲು ಹಾಗೂ ಮಣ್ಣನ್ನು ಬಳಸಲಾಗಿದೆ. ಕೋಟೆ ಆಂಜನೇಯನ ಗುಡಿಯ ಬಳಿ ಇರುವುದೇ ಮುಖ್ಯ ಪ್ರವೇಶದ್ವಾರ. ಈಗ ಯಾವುದೇ ಅವಶೇಷಗಳು ಉಳಿದಿಲ್ಲ. ಸಾಮಾನ್ಯವಾಗಿ ಆಂಜನೇಯನ ದೇವಾಲಯಗಳು ಕೋಟೆಯ ಪ್ರವೇಶದ್ವಾರದ ಬಳಿಯೇ ಇರುತ್ತವೆ.

ಈ ಕೋಟೆಯನ್ನು ಸ್ಥಳೀಯರು ಎರಡು ಸುತ್ತಿನಕೋಟೆ ಎಂದು ಕರೆಯುತ್ತಾರೆ. ಇದಕ್ಕೆ ಪೂರಕವೆಂಬಂತೆ ಆ ಕೋಟೆ ಸುತ್ತುಗಳಿಗೆ ಇಟ್ಟಿರುವ ಹೆಸರುಗಳು ಇಂದಿಗೂ ರೂಢಿಯಲ್ಲಿವೆ. ಒಂದನೆಯದು ಹೊನ್ನವ್ವ ನಾಗತಿಯದ್ದಾದರೆ, ಎರಡನೆಯದು ಸಂಜೀವನಾಯಕನದು. ಹೊನ್ನವ್ವನಾಗತಿ ಹರಪನಹಳ್ಳಿಯ ಮೊದಲ ಪಾಳೆಯಗಾರನಾದ ದಾದಯ್ಯನಾಯಕನ ಪ್ರೀತಿಯ ಪತ್ನಿ. ಈಕೆ

ಚಿತ್ರದುರ್ಗದ ತಿಮ್ಮಣ್ಣ ನಾಯಕನ ಮಗಳು. ಯುದ್ಧದಲ್ಲಿ ಸಹಾಯ ಮಾಡಿದ್ದಕ್ಕಾಗಿ ತಿಮ್ಮಣ್ಣನಾಯಕ ಮಗಳನ್ನು ದಾದಾನಾಯಕನಿಗೆ ಕೊಟ್ಟು ಮದುವೆ ಮಾಡಿದ್ದ. ಇವಳ ಅಕಾಲಿಕ ಮರಣ ಇವರಿಗೆ ತುಂಬಲಾರದ ಮಾನಸಿಕ ನಷ್ಟವಾಯಿತು. ಹಾಗಾಗಿ ಕೋಟೆಯ ಮೊದಲ ಸುತ್ತಿಗೆ ದಾದಯ್ಯನಾಯಕ ಅವಳ ಹೆಸರನ್ನೆ ಇಟ್ಟನೆಂಬುದು ಪ್ರತೀತಿ.

ಸಂಜೀವನಾಯಕ ಹರಪನಹಳ್ಳಿ ಸಂಸ್ಥಾನದ ಸೋಮಶೇಖರ ನಾಯಕನ ಸೇನೆಯಲ್ಲಿದ್ದನು. ಅರಸರ ಅಂಗರಕ್ಷಕ ಪಡೆಯ ಮುಖ್ಯಸ್ಥನು, ಪರಾಕ್ರಮಿಯು ಆದ ಸಂಜೀವನಾಯಕನು ಅನ್ಯ ಅರಸರು ಯುದ್ಧಕ್ಕೆ ಸೈನ್ಯದೊಂದಿಗೆ ಬಂದು ದಾಳಿ ಮಾಡಿದಾಗ ಸೈನ್ಯದ ಮೇಲೆ ಪ್ರತಿದಾಳಿ ಮಾಡಿ ಅವರನ್ನು ಹಿಮ್ಮೆಟ್ಟಿಸುತ್ತಿದ್ದನು. ಮೊದಲ ಸೋಮಶೇಖರ ನಾಯಕನು ಮಾಡಿದ ಅನೇಕ ಯುದ್ಧಗಳಲ್ಲಿ ಅವರಿಗೆ ನೆರಳಿನಂತೆ ಇದ್ದು ಯುದ್ಧಮಾಡಿ ಜಯ ಸಂಪಾದಿಸಿ ಕೊಟ್ಟಿದ್ದನು. ಸಂಜೀವನಾಯಕನು ಬೇಟೆಗಾಗಿ ಹೊರಗೆ ಹೋಗಿದ್ದ ಸಂದರ್ಭದಲ್ಲಿ ಚಿತ್ರದುರ್ಗದ ಸೈನಿಕರು ಬಂದು ಕಲ್ಲಾಗಿನ ದುರುಗವ್ವನ ಗುಡಿಯ ತಗ್ಗುಪ್ರದೇಶದಲ್ಲಿ ಅಡಗಿದ್ದು, ಸಂಜೆ ಹೊತ್ತಿಗೆ ಕೂಲಹಳ್ಳಿ ಬಯಲಿಗೆ ಬಂದು ದಂಗೆ ಎಬ್ಬಿಸಿದರು. ಆಗ ಸಂಜೀವ ನಾಯಕನ ಮಡದಿ ವೀರಗಚ್ಚೆ ಹಾಕಿ ಶತ್ರು ಸೈನ್ಯವನ್ನು ಎದುರಿಸಿದಳು. ಅವಳ ಜೊತೆಯಲ್ಲಿ ಕೆಲ ಮಹಿಳಾ ವೀರಮಾತೆಯರೂ ಇದ್ದರು. ಈ ಯುದ್ಧದಲ್ಲಿ ಸಂಜೀನಾಯಕನ ಮಡದಿ ಸಾವನ್ನಪ್ಪಿದಳು. ಬೇಟೆಯಿಂದ ಹಿಂದಿರುಗಿದ ಸಂಜೀನಾಯಕ ತನ್ನ ಪೌಜುನೊಂದಿಗೆ ಯುದ್ಧ ಆರಂಭಿಸಿ ಹೋರಾಟ ಮಾಡಿ ವೀರಾಗ್ರಣಿ. ಹಾಗಾಗಿ ಈ ಸಂಜೀವ ನಾಯಕನ ಹೆಸರನ್ನು ಈ ಕೋಟೆಯ ಎರಡನೆಯ ಸುತ್ತಿಗೆ ಇಡಲಾಯಿತೆಂಬುದು ಇಲ್ಲಿಯ ಜನರಲ್ಲಿರುವ ನಂಬಿಕೆ.

ಪ್ರಸ್ತುತ ಹರಕಲು ಮುರುಕಲು ಗೋಡೆಯ ಅವಶೇಷಗಳು ಮಾತ್ರ ಅಲ್ಲಲ್ಲಿ ಗೋಚರಿಸುತ್ತವೆ. ಕೋಟೆಯ ಆಗ್ನೇಯ ದಿಕ್ಕಿನಲ್ಲಿ ಕೊತ್ತಳವಿರುವುದು ಇನ್ನುಳಿದ ಕೊತ್ತಳಗಳು ಸಂಪೂರ್ಣ ನಾಶವಾಗಿದೆ. ಕೋಟೆಯ ಮಧ್ಯಭಾಗದಲ್ಲಿ ವಿಶಾಲವಾದ ಬಯಲಿದೆ. ಇಲ್ಲಿ ಸೈನಿಕರಿಗೆ ತರಬೇತಿ ನೀಡಲಾಗುತ್ತಿತ್ತೆಂದು, ಹಾಗೂ ಇಲ್ಲಿಂದ ಪಶ್ಚಿಮಕ್ಕೆ ಸೈನಿಕರ ವಸತಿಗಳಿದ್ದವೆಂದು ಸ್ಥಳೀಯ ಮೂಲಗಳು ತಿಳಿಸುತ್ತವೆ. ಇದಕ್ಕೆ ಪೂರಕವೆಂಬಂತೆ ವಸತಿಗೃಹಗಳ ತಳಪಾಯಗಳು ಇಲ್ಲಿ ಕಂಡುಬಂದಿವೆ. ಇತ್ತೀಚೆಗೆ ಇದರ ಪಕ್ಕದಲ್ಲಿ ಪದವಿ ಕಾಲೇಜನ್ನು ಕಟ್ಟಲಾಗಿದೆ.

ಡಾ. ಎಸ್ ಕೆ. ಜೋಶಿಯವರು ಈ ಕೋಟೆಯ ವಿನ್ಯಾಸ, ರಚನಾ ಕ್ರಮ ಹಾಗೂ ಅವಶ್ಯಕತೆಗಳಲ್ಲಿ ಹಿಂದೂ ಪದ್ಧತಿಯಿದ್ದು ಇದನ್ನು ಹಿಂದೂ ವಾಸ್ತುಕೋಟೆ ಎಂದಿದ್ದಾರೆ. ಈ ಕೋಟೆಯನ್ನು ಉಳಿದಿರುವ ಏಕೈಕ ಪಾಳೆಯಗಾರರ ವಾಸ್ತುಕೃತಿ ಎಂದರೆ ಆಂಜನೇಯ ದೇವಾಲಯ. ಇದು ದಕ್ಷಿಣಾಭಿಮುಖವಾಗಿದ್ದು, ಗರ್ಭಗೃಹ ಹಾಗೂ ಸಭಾಮಂಟಪಗಳನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಆಂಜನೇಯನ ಉಬ್ಬುಶಿಲ್ಪವಿದೆ. ಇಂದಿಗೂ ಕೂಡ ಕೋಟೆ ಆಂಜನೇಯನೆಂದೇ ಆರಾಧನೆಗೊಳ್ಳುತ್ತಿದೆ. ಇಲ್ಲಿ ಪ್ರತಿವರ್ಷ ದೊಡ್ಡ ಪ್ರಮಾಣದಲ್ಲಿ ಜಾತ್ರೆ ಜರುಗುತ್ತದೆ.

**<u>ಟಿಪ್ಪಣಿಗಳು</u>**

೧. ಪುಟ್ಟಣ್ಣ, ಎಂ.ಎಸ್.೧೯೨೪. ಚಿತ್ರದುರ್ಗ ಪಾಳೆಗಾರರು, ಪು.೧೭. ಬೆಂಗಳೂರು

೨. ಅದೇ, ಪು.೨೭

೩. ಅದೇ, ಪು.೪೯೪.

೪. ಶಾಮಶಾಸ್ತ್ರಿ, ಆರ್.ಸಂ., ೧೯೭೩. ಕೆಳದಿನೃಪವಿಜಯ ಲಿಂಗಣ್ಣ ಕವಿ ಮೈಸೂರು ಮೈಸೂರು ವಿಶ್ವವಿದ್ಯಾಲಯ

೫. ಗೋವಿಂದಚಾರ್ಯ ಚಿಕ್ಕನೂರ. ಅಪ್ರಕಟಿತ ಹಸ್ತಪ್ರತಿ

೬. ಜೋಶಿ, ಎಸ್.ಕೆ.೨೦೦೦. ಕರ್ನಾಟಕದ ಪ್ರಾಚೀನ ಕೋಟೆಗಳು ಮತ್ತು ಇತಿಹಾಸ, ಸೂರ್ಯಕೀರ್ತಿ ಸಂ.ಕೃಷ್ಣಮೂರ್ತಿ ಪಿ.ವಿ, ಮತ್ತು ಕೆ.ವಸಂತಲಕ್ಷ್ಮಿ, ಪು. ೧೪೮ ೫೧ ಬೆಂಗಳೂರು ಸೂರ್ಯನಾಥ ಕಾಮತ್ ಅಭಿನಂದನಾ ಸಮಿತಿ

೭. ಸದಾಶಿವಪ್ಪ, ಕುಂ.ಬಾ.೧೯೯೬. ಹರಪನಹಳ್ಳಿ ಪಾಳೆಯಗಾರರು, ಪು.೧೩. ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು

೮. ಕರ್ನಾಟಕದ ಪ್ರಾಚೀನ ಕೋಟೆಗಳು ಮತ್ತು ಇತಿಹಾಸ, ಪೂರ್ವೋಕ್ತ. ಪು. ೧೪೮ ೫೧

# ೫. ಹಲುವಾಗಿಲು

ಹರಪನಹಳ್ಳಿ ತಾಲೂಕಿನಲ್ಲಿರುವ ಈ ಗ್ರಾಮವು ಹರಪನಹಳ್ಳಿಯಿಂದ ನೈರುತ್ಯಕ್ಕೆ ೨೮ ಕಿ.ಮೀ ದೂರದಲ್ಲಿದೆ. ಪ್ರಾಚೀನ ಮಾನವನ ಆವಾಸಸ್ಥಾನವಾದ ಹಲುವಾಗಿಲನ್ನು ಕಲ್ಯಾಣ ಚಾಳುಕ್ಯರು, ಯಾದವರು, ವಿಜಯನಗರದ ಅರಸರು, ಹರಪನಹಳ್ಳಿ ಪಾಳೆಯಗಾರರು ಇಲ್ಲಿ ಆಳ್ವಿಕೆ ನಡೆಸಿದಂತೆ ಶಾಸನ ಹಾಗೂ ಸಾಹಿತ್ಯಾಧಾರಗಳು ದೃಢಪಡಿಸುತ್ತವೆ.

ನೊಳಂಬವಾಡಿ ೩೨ ಸಾವಿರ, ಕದಂಬಳಿಕೆ ಸಾವಿರ, ಕೋಗಳಿ ಐದುನೂರು ಇದರಲ್ಲಿ ಉಚ್ಚಂಗಿ ३೦ ಸೇರುತ್ತದೆ. ಉಚ್ಚಂಗಿ ಮೂವತ್ತರಲ್ಲಿ ಹಲುಬಾಗಿಲು ೧೨ ಒಂದು. ಈ ಹಲುಬಾಗಿಲು ಗ್ರಾಮವು ಹೆಚ್ಚಾಗಿ ಉಚ್ಚಂಗಿ ಮೂವತ್ತರ ಪಟ್ಟಣಕ್ಕೆ ಪ್ರವೇಶದ್ವಾರವಾಗಿತ್ತು. ಹಲುವಾಗಿಲು ಬಳಿಯ ತುಂಗಭದ್ರಾ ನದಿಯ ದಂಡೆಯಲ್ಲಿ ಕಟ್ಟಿದ ಪ್ರವೇಶದ್ವಾರಕ್ಕೆ ಆನೆಯ ದಂತಗಳಿಂದ ಕೊರೆದು ಮಾಡಿದ ಬಾಗಿಲುಗಳಿದ್ದ ಕಾರಣದಿಂದಲೇ ಸಂಸ್ಕೃತ ಭಾಷೆಯಲ್ಲಿ ಈ ಹಳ್ಳಿಗೆ ದಂತದ್ವಾರವೆಂದು ಹೆಸರಿಟ್ಟರು. ಅದೇ ಹಲುವಾಗಿಲು ಎಂಬುದಾಗಿ ಚಿಕ್ಕೇರೂರು ಗೋವಿಂದಚಾರ್ಯರು ಪ್ರಸ್ತಾಪಿಸಿರುವರು.

ಈ ಗ್ರಾಮದ ವಾಯುವ್ಯ ದಿಕ್ಕಿಗೆ ತುಂಗಭದ್ರಾ ನದಿ ಇದೆ. ಈ ನದಿಗೆ ಹೊಂದಿಕೊಂಡು ಪೂರ್ವಕ್ಕೆ ಹಬ್ಬಿರುವ ಪರ್ವತದ ಸಾಲು ಇದೆ. ಈ ಪರ್ವತದ ಸಾಲಿನಲ್ಲಿಯೇ ಕೋಟೆ ಕಂಡುಬರುತ್ತದೆ. ಪೂರ್ವಪಶ್ಚಿಮವಾಗಿ ಹಬ್ಬಿರುವ ಈ ಬೆಟ್ಟವನ್ನು ಬಳಸಿಕೊಂಡು ಕೋಟೆ ನಿರ್ಮಿಸಲಾಗಿದೆ. ಪಶ್ಚಿಮ ದಿಕ್ಕಿಗೆ ನದಿ ಹರಿಯುವುದರಿಂದ ಶತ್ರುಗಳಿಗೆ ಈ ಕೋಟೆ ತಲುಪಲು ಕಷ್ಟಸಾಧ್ಯ. ಬೆಟ್ಟದ ದಕ್ಷಿಣ ಹಾಗೂ ಉತ್ತರ ಭಾಗಗಳಲ್ಲಿ ಅಲ್ಲಲ್ಲಿ ಕೋಟೆ ಗೋಡೆ ಕಂಡುಬರುತ್ತದೆ. ಒಳಭಾಗದಲ್ಲಿ ಕೊತ್ತಳಗಳಿದ್ದ ಅವಶೇಷಗಳಿವೆ. ಪ್ರಾಯಶಃ ಹಲುವಾಗಿಲು ಗ್ರಾಮದ ದಕ್ಷಿಣಕ್ಕಿರುವುದರಿಂದ ಕೋಟೆ ದ್ವಾರವೂ ಸಹ ಈ ಭಾಗಕ್ಕೆ ಇದ್ದಿರಬಹುದು. ಪೂರ್ಣ ಶಿಥಿಲಾವಸ್ಥೆಯಲ್ಲಿರುವ ಕೋಟೆಯನ್ನು ಮಧ್ಯಮಗಾತ್ರದ ಕಣಶಿಲೆಯಿಂದ ಕಟ್ಟಲಾಗಿದೆ. ಕ್ರಿ.ಶ.೧೩ನೆಯ ಶತಮಾನದ ವೀರಗಲ್ಲಿನಲ್ಲಿ ಹಲುವಾಗಿಲು ಬಡಗಮಟ್ಟಿ ಪುಣೋಜನು ಕದಿರು ಮಿಡಿಯ ಕಾಳಗದಲ್ಲಿ ಸತ್ತ ಉಲ್ಲೇಖವಿದೆ. ಬಡಗ ಎಂದರೆ ಉತ್ತರ. ಮಟ್ಟಿ ಎಂದರೆ ಎತ್ತರ, ದಿನ್ನೆ ಪ್ರದೇಶವೆಂದು ಅರ್ಥವಾಗುತ್ತದೆ. ಅಂದರೆ ಹಲುವಾಗಿಲು ಕೋಟೆ ಪ್ರದೇಶವನ್ನು ಈ ವೀರಗಲ್ಲು ಗುರುತಿಸುತ್ತದೆ. ಯಾದವ ರಾಮಚಂದ್ರರಾಯನು ಹೊಯ್ಸಳರ ರಾಜ್ಯವನ್ನು ಗೆದ್ದು ಮುಸ್ಲಿಂರಿಂದ ಈ ಭೂಮಿಯನ್ನು ಕಾಪಾಡಿದಂತೆ ಇಲ್ಲಿಯ ಕಲ್ಲೇಶ್ವರ ದೇವಾಲಯದ ಶಾಸನವು ತಿಳಿಸುತ್ತದೆ. ಯಾದವ ರಾಮಚಂದ್ರರಾಯನ ಈ ರಾಜ್ಯದಲ್ಲಿ ರಕ್ಷಣೆಗಾಗಿ ಹೋರಾಡಿ ಸೆಜೆಯ ಮಲ್ಲಯ್ಯನನ್ನು ಉಲ್ಲೇಖಿಸುವ ವೀರಗಲ್ಲು ಕಲ್ಲೇಶ್ವರ ದೇವಾಲಯದ ಬಳಿ ಇದೆ. ಶಾಸನಗಳನ್ನು ಗಮನಿಸಲಾಗಿ ಇಲ್ಲಿಯ ಕೋಟೆ ೧೨ ರಿಂದ ೧೩ನೇ ಶತಮಾನದಲ್ಲಿಯೇ ಅಸ್ತಿತ್ವದಲ್ಲಿರಬಹುದಾದದ್ದು ಎಂದು ತಿಳಿದುಬರುತ್ತದೆ. ಕೋಟೆಯ ಮುಂದಣ ಪ್ರದೇಶ ಯುದ್ಧಭೂಮಿಯಾಗಿತ್ತು. ಏಕೆಂದರೆ, ಸ್ಥಳವು ವಿಶಾಲವಾಗಿದ್ದು, ಈ ನೆಲದಲ್ಲಿ ಮಾನವನ ಅಸ್ಥಿಪಂಜರಗಳು ಕಂಡುಬಂದಿದೆ. ಸದ್ಯ ಕೋಟೆ ಶಿಥಿಲಾವಸ್ಥೆಯನ್ನು ತಲುಪಿದೆ. ವಿಜಯನಗರೋತ್ತರರ ಕಾಲದಲ್ಲಿ ನಿರ್ಮಾಣವಾಗಿದ್ದರೆ ಬೆಟ್ಟದ ಮೇಲಿರುವುದರಿಂದ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಎರಡನೆಯದಾಗಿ ವಿಜಯನಗರ ಪೂರ್ವದ ಕೋಟೆಗಳಾದ ದೊರವಡಿ ಹಾಗೂ ಹೊಸಮಲೆದುರ್ಗಗಳು ಹಲುವಾಗಿಲು ಕೋಟೆಯ ಅವಸ್ಥೆಯನ್ನೇ ತಲುಪಿವೆ. ಈ ಎಲ್ಲಾ ಕಾರಣಗಳಿಂದ ಯಾದವ ರಾಮಚಂದ್ರರಾಯನು ಹೊಯ್ಸಳರನ್ನು ಸೋಲಿಸಿ, ತನ್ನ ರಾಜ್ಯವನ್ನು ಹಲುವಾಗಿಲುವರೆಗೆ ವಿಸ್ತರಿಸಿದನು. ತನ್ನ ಅವಧಿಯನ್ನು ಶತ್ರುಗಳಿಂದ ರಾಜ್ಯದ ಗಡಿಯನ್ನು ರಕ್ಷಿಸಲು ಹಲುವಾಗಿಲು ಕೋಟೆ ನಿರ್ಮಾಣ ಮಾಡಿರಬಹುದು.

ಕೋಟೆಯ ದಕ್ಷಿಣದ ಭೂಭಾಗದಲ್ಲಿ ನೂತನ ಶಿಲಾಯುಗದ ಅವಶೇಷಗಳು ದೊರೆತಿರುವುದರಿಂದ ಇಲ್ಲಿಯ ಪ್ರಾಚೀನತೆಯ ಅರಿವಾಗುತ್ತದೆ. ಇತ್ತೀಚಿಗೆ ಕ್ರಿ.ಶ. ೮ ನೆಯ ಶತಮಾನದ ಶಾಸನವು ಈ ಪ್ರದೇಶದಲ್ಲೇ ದೊರೆತಿದೆ. ಗ್ರಾಮದಲ್ಲಿ ಕಲ್ಲೇಶ್ವರ ಮತ್ತು ಆಂಜನೇಯ ದೇವಾಲಯಗಳಿವೆ. ಕಲ್ಲೇಶ್ವರ ದೇವಾಲಯವು ಕಲ್ಯಾಣ ಚಾಳುಕ್ಯರ ಕಾಲದ್ದು. ಈ ದೇವಾಲಯಕ್ಕೆ ೧೩ ನೇ ಶತಮಾನದಲ್ಲಿ ಇಲ್ಲಿ ಆಳ್ವಿಕೆ ನಡೆಸಿದ ಯಾದವ ರಾಮಚಂದ್ರರಾಯನ ಅಧಿಪತ್ಯದಲ್ಲಿ ನಾಚರಸನು ಈ ದೇವಾಲಯಕ್ಕೆ ದಾನ

ಬಿಟ್ಟಂತೆ ತಿಳಿಸುತ್ತದೆ. ವಿಜಯನಗರದ ಬುಕ್ಕರಾಯನ ಶಾಸನವು ಈ ಗ್ರಾಮದ ಆಂಜನೇಯ ದೇವಾಲಯದ ಬಳಿ ಇದೆ. ಕೋಟೆಯ ಸಂಪೂರ್ಣ ನಾಶವಾಗಿರುವುದರಿಂದ ಪತ್ತೆ ಹಚ್ಚುವುದು ಕಷ್ಟಕರವಾಗಿದೆ. ಹೀಗಾಗಿ ಇದು ಐತಿಹಾಸಿಕ ಮಹತ್ವದ ಸ್ಥಳ ಎಂಬುದು ಸ್ಪಷ್ಟ.

**ಟಿಪ್ಪಣಿಗಳು**

೧. ಗೋವಿಂದಚಾರ್ಯ ಚಿಕ್ಕರೂರು. ಅಪ್ರಕಟಿತ ಹಸ್ತಪ್ರತಿ

೨. ದೇವಕೊಂಡಾರೆಡ್ಡಿ ಮತ್ತು ಇತರರು. ೧೯೯೮. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ಬಳ್ಳಾರಿ ಜಿಲ್ಲೆ ೧ ಪು. ೫೨೩. ಹಂಪಿ ಕನ್ನಡ ವಿಶ್ವವಿದ್ಯಾಲಯ

೩. ಅದೇ, ಪು. ೫೧೯

೪. ಅದೇ, ಪು. ೫೧೭

೫. ಅದೇ, ಪು.೫೧೯

೬. ಅದೇ, ಪು. ೫೨೧

೭. ಅದೇ, ಪು.೫೨೨

## ಹರಪನಹಳ್ಳಿ ತಾಲೂಕಿನ ರಕ್ಷಣಾ ಸ್ಮಾರಕಗಳು

ಈ ಮುಂಚೆ ಹರಪನಹಳ್ಳಿಯಯು ಬಳ್ಳಾರಿ ಜಿಲ್ಲೆಯಲ್ಲಿತ್ತು. ನಂತರ ನೂತನವಾಗಿ ರಚಿತವಾದ ದಾವಣಗೆರೆ ಜಿಲ್ಲೆಗೆ ಸೇರ್ಪಡೆಯಾಗಿದ್ದು, ದಾವಣಗೇರಿಯಿಂದ ಉತ್ತರಕ್ಕೆ ೫೦ ಕಿ.ಮೀ. ದೂರದಲ್ಲಿದೆ. ದಾವಣಗೆರೆ ಜಿಲ್ಲೆಯು ಒಂದು ತಾಲೂಕಿನ ಕೇಂದ್ರ. ಈ ತಾಲೂಕನ್ನು ಉತ್ತರದಲ್ಲಿ ಹಡಗಲಿ. ಪೂರ್ವದಲ್ಲಿ ಕೂಡ್ಲಿಗಿ ಮತ್ತು ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲೂಕುಗಳು, ದಕ್ಷಿಣದಲ್ಲಿ ದಾವಣಗೆರೆ ಜಿಲ್ಲೆಯ ಹರಿಹರ ಮತ್ತು ದಾವಣಗೆರೆ ತಾಲೂಕುಗಳು ಪಶ್ಚಿಮದಲ್ಲಿ ಹಾವೇರಿ ಜಿಲ್ಲೆಯ ರಾಣಿಬೆನ್ನೂರು ತಾಲೂಕುಗಳು ಸುತ್ತುವರೆದಿವೆ. ಚಿಗಟೇರಿ, ಅರಸಿಕೇರಿ, ಹರಪನಹಳ್ಳಿ, ತೆಲಗಿ, ಉಚ್ಚಂಗಿದುರ್ಗ ಪ್ರಮುಖ ಹೋಬಳಿ ಕೇಂದ್ರಗಳಾಗಿವೆ. ಉತ್ತರಕ್ಕೆ ಇಳಿಜಾರಾಗಿರುವ ಈ ತಾಲೂಕಿನ ಕಲ್ಲಹಳ್ಳಿ ಗುಡ್ಡ ಶ್ರೇಣಿಯಿಂದ ಕಲ್ಲಹಳ್ಳಿ ಶಿಖರ ೮೫೩ ಮೀ.ಎತ್ತರವಿದೆ. ಮುಂದೆ ಈ ಶ್ರೇಣಿಯು ಕವಲೊಡೆದು ತೆಲಿಗಿ ಗುಡ್ಡ ಸಮೂಹ ದಕ್ಷಿಣ ಭಾಗದಲ್ಲಿ ಉಚ್ಚಂಗಿದುರ್ಗದವರೆಗೂ ಮುಂದುವರೆದಿದೆ. ತಾಲೂಕಿನ ಪಶ್ಚಿಮದ ಎಲ್ಲೆಯಲ್ಲಿ ತುಂಗಭದ್ರಾ ನದಿ ಗಡಿಯಾಗಿ ಸ್ವಲ್ಪದೂರ ಹರಿದು ಹಾವೇರಿ ಜಿಲ್ಲೆಯ ರಾಣಿಬೆನ್ನೂರು ತಾಲೂಕನ್ನು ಬೇರ್ಪಡಿಸಿದೆ. ತಾಲೂಕಿನ ಪೂರ್ವದಲ್ಲಿ ಚಿಕ್ಕಹಗರಿ ನದಿ ಉತ್ತರಾಭಿಮುಖವಾಗಿ ಹರಿಯುವುದು. ಸಹ್ಯವೆನಿಸುವ ಉತ್ತಮ ಹವಾಗುಣವಿದೆ. ಈ ಪ್ರದೇಶದ ವಾರ್ಷಿಕ ಸರಾಸರಿ ಮಳೆ ೭೩೦.೨೦ ಮಿ.ಮೀ.ಇದೆ.

ಹರಪನಹಳ್ಳಿಯು ಈ ಹಿಂದೆ ಒಂದು ಅಗ್ರಹಾರವಾಗಿದ್ದಿರಬೇಕು. ಅದರ ಮೂಲ ಹೆಸರು ಬ್ರಹ್ಮಪುರಿ ಹೊಮ್ಮನಹಳ್ಳಿ ಹರಿಯಪ್ಪ ಪರ್ಗಡೆಯ ಹೆಸರಿನಲ್ಲಿ ಬದಲಾವಣೆ ಹೊಂದಿ 'ಹರಪನಹಳ್ಳಿ' ಎಂದಾಯಿತು. ಕೊಟ್ಟೂರಿನ ಉಡುಕೇಶ್ವರ ದೇವಾಲಯದ ಶಾಸನದಲ್ಲಿ ಈ ಹರಿಯಪ್ಪನ ಪ್ರಸ್ತಾಪವಿದೆ. ಪ್ರಾಚೀನ ಕಾಲದ ಗ್ರಾಮಗಳ ಸ್ಥಳನಾಮಗಳು ಹೆಚ್ಚಾಗಿ ಆಳುವ ಅರಸರ, ಇಲ್ಲವೆ ದೇವ ದೇವತೆಗಳ ಹೆಸರುಗಳಿಂದ ಉಂಟಾಗಿರುವುವು. ಮುತ್ತಿಗೆ ಗ್ರಾಮದಲ್ಲಿ ದೊರೆತ ದಾಖಲೆಯಂತೆ ಮುತ್ತಿಗೆ ಗ್ರಾಮದ ಕಟ್ಟೆ ಮನೆಗೆ ಸಂಬಂಧಿಸಿದಂತೆ ಒಂದು ವಿವಾದವನ್ನು ಈ ಹರಿಯಪ್ಪ ಪೆರ್ಗಡೆ ವಂಶಕ್ಕೆ ಸೇರಿದವರು ವಿಚಾರಿಸಿ ತೀರ್ಮಾನ ಕೊಟ್ಟಿದ್ದು ಕಂಡುಬಂದಿದೆ. ಅದು ಈಗಲೂ ಮುತ್ತಿಗೆ ಗ್ರಾಮದಲ್ಲಿ ದೊರಕುವುದು. ಮುತ್ತಿಗೆ ಶಾನುಭೋಗರು ಹರಪನಹಳ್ಳಿ ಪಣ್ಣಣದವರೇ ಆಗಿರುವರು. ಹದಿಮೂರನೇ ಶತಮಾನದಲ್ಲಿ ಹರಪನಹಳ್ಳಿ, ಮೂವತ್ತರ ಮುತ್ತಿಗೆ ರಾಜ್ಯದಿಂದ ಬಾಗಳಿ ರಾಜ್ಯಕ್ಕೆ ಸೇರಿದ್ದು ಎಂದು, ಒಂದು ಕಂಚಿನ ಪತ್ರದಿಂದ ತಿಳಿಯುತ್ತದೆ. 'ಹರಿಯಪ್ಪನಹಳ್ಳಿ' ಶ್ರೀ ಸಾಮಾನ್ಯರ ಆಡುಮಾತಿನಲ್ಲಿ ಹರಿಯಾತನಹಳ್ಳಿ ಕಾಲಾಂತರದಲ್ಲಿ ಹರಪನಹಳ್ಳಿ ಎಂದು ಕರೆಯಿಸಿಕೊಂಡಿದೆ ಎಂಬ ವಿಷಯವನ್ನು ಕುಂ.ಬಾ. ಸದಾಶಿವಪ್ಪನವರು ವ್ಯಕ್ತಪಡಿಸುತ್ತಾರೆ. ಹರಪನಹಳ್ಳಿಯ

ಇತಿಹಾಸವು ನಮಗೆ ಸ್ಪಷ್ಟವಾಗಿ ತಿಳಿಯುವುದು ವಿಜಯನಗರೋತ್ತರ ಪಾಳೆಯಗಾರರ ಆಳ್ವಿಕೆಯಿಂದ. ಆದರೆ ಹರಪನಹಳ್ಳಿ ತಾಲ್ಲೂಕಿನಲ್ಲಿ ಬರುವ ಬಹುತೇಕ ಗ್ರಾಮಗಳು ತುಂಬಾ ಪ್ರಾಚೀನ ಇತಿಹಾಸವನ್ನು ಹೊಂದಿರುವುದು ಶಾಸನಗಳಿಂದ ಬರುವ ಬಹುತೇಕ ದೃಢಪಡುತ್ತದೆ. ಆದರೆ ಈ ಯಾವ ಶಾಸನಗಳಲ್ಲಿಯೂ ಹರಪನಹಳ್ಳಿಯ ಉಲ್ಲೇಖ ಇರುವುದಿಲ್ಲ.

ಕ್ರಿ.ಶ. ೯೩೧ರ ರಾಷ್ಟ್ರಕೂಟರ ಶಾಸನವು ಗೋವಿಂದ ವಲ್ಲಭನ ಕಾಲದಲ್ಲಿ ಪಡಿಗನೊಂಬಾ ಎಂಬ ವೀರನು ಊರ ದಾಳಿಯಲ್ಲಿ ಸತ್ತಂತೆ ಉಲ್ಲೇಖಿಸುತ್ತದೆ. ಕ್ರಿ.ಶ. ೯೫೬, ಕ್ರಿ.ಶ.೯೪೪, ಕ್ರಿ.ಶ. ೯೭೬,ಕ್ರಿ.ಶ.೯೯೧ರ ರಾಷ್ಟ್ರಕೂಟರ ಶಾಸನಗಳು[1] ಬಾಗಳಿಯಲ್ಲಿ ಕಂಡುಬರುತ್ತವೆ. ಇವು ರಾಷ್ಟ್ರಕೂಟರ ಕನ್ನರದೇವನ ದೊರೆಯ ದಾನ - ದತ್ತಿಗಳನ್ನು ತಿಳಿಸುತ್ತವೆ. ಬಾಗಳಿ ಮತ್ತು ಉಚ್ಚಂಗಿದುರ್ಗಗಳಲ್ಲಿ ರಾಷ್ಟ್ರಕೂಟದ ದೇವಾಲಯಗಳೂ ಕಂಡುಬಂದಿದೆ. ಕೋಟೆಗಳ ವಿಷಯವಾಗಿ ರಾಷ್ಟ್ರಕೂಟರ ಶಾಸನಗಳು ಮೌನವಾಗಿವೆ.

ಕಲ್ಯಾಣ ಚಾಳುಕ್ಯರ ಸಾಮಂತರಾದ ನೊಳಂಬರು, ನೊಳಂಬವಾಡಿ ೩೨೦೦೦ ದ ಮಹಾ ಮಂಡಳೇಶ್ವರರಾಗಿ ಆಳ್ವಿಕೆ ಮಾಡಿದಂತೆ ಉಲ್ಲೇಖಿಸುವ ನೂರಾರು ಕಲ್ಯಾಣ ಚಾಲುಕ್ಯರ ಶಾಸನಗಳು ಈ ಭಾಗದಲ್ಲಿ ಕಂಡುಬರುತ್ತವೆ. ಹಿಂದೆ ಬಳ್ಳಾರಿ ಜಿಲ್ಲೆಯು ಸಮಗ್ರವಾಗಿ ನೊಳಂಬವಾಡಿ ೩೨೦೦೦ ವಿಭಾಗದಲ್ಲಿತ್ತು. ನೊಳಂಬವಾಡಿ ಎಂದರೆ ದೊಡ್ಡ ವಿಭಾಗ ಎನ್ನುವ ಅರ್ಥವುಂಟು. ಹಿಂದೆ ಈ ಪ್ರದೇಶವನ್ನು ಪಲ್ಲವರು ಆಳುತ್ತಿದ್ದರು.[2] ಈ ನೊಳಂಬವಾಡಿ ೩೨೦೦೦ ದಲ್ಲಿ ಕೋಗಳಿ ೫೦೦ ಬರುತ್ತದೆ. ಇದಕ್ಕೆ ಹಗರಿಬೊಮ್ಮನಹಳ್ಳಿ, ಹಡಗಲಿ, ಕೂಡ್ಲಿಗಿ, ಹರಪನಹಳ್ಳಿ ತಾಲ್ಲೂಕುಗಳ ಕೆಲವು ಗ್ರಾಮಗಳು ಒಳಗೊಂಡಿದ್ದವು. ಕೋಗಳಿ ೫೦೦ ರ ಉಪವಿಭಾಗವಾಗಿ ಹಾಲ್ವೊಳ - ೧೨, ಬಿಕ್ಕಿಗ - ೭೦, ಹಲುವಾಗಿಲು - ೧೨, ಬೆಣ್ಣೆವೂರು - ೧೨, ಕಂಪಣ ಮೊಗೆ - ೧೨, ಒರ್ವಾಯಿ - ೧೨, ಮೊಳವಾಡ - ೧೨, ಮುತ್ತಗಿ - ೩೦, ಕೊಟ್ಟೂರು - ೧೨, ಬೆಣ್ಣೆಕಲ್ಲು - ೧೨, ದುಗ್ಗವತ್ತಿ - ೧೨, ಸೇರುತ್ತವೆ. [3] ಇದರಲ್ಲಿ ಬಿಕ್ಕಿಗ - ೭೦, ಹಲುವಾಗಿಲು - ೧೨, ಮುತ್ತುಗೆ - ೩೦, ಇವು ಅಲ್ಲದೆ ಕದಂಬಗಳಿಗೆ ೧೦೦೦ ರಲ್ಲಿ ಉಚ್ಚಂಗಿದುರ್ಗ ೩೦ ಕೂಡ ಸೇರುತ್ತದೆ. ಈ ಮೇಲಿನ ಆಡಳಿತ ಕೇಂದ್ರದಲ್ಲಿ ಉಚ್ಚಂಗಿದುರ್ಗ - ೩೦ ಹಲುವಾಗಿಲು ೧೨, ಮುತ್ತುಗೆ ೩೦, ಬೆಣ್ಣೆಕಲ್ಲು ೧೨ ಇವು ಹರಪನಹಳ್ಳಿ ತಾಲ್ಲೂಕಿಗೆ ಒಳಪಡುತ್ತವೆ. ಹರಪನಹಳ್ಳಿ ತಾಲ್ಲೂಕಿನ ದುಗ್ಗತ್ತಿ,ಮಾಡಲಗೇರಿ, ಬಾಗಳಿಗಳಲ್ಲಿ ಜೈನ ಬಸದಿಗಳು ಇದ್ದ ಉಲ್ಲೇಖವನ್ನು ಈ ಪ್ರದೇಶದ ಕಲ್ಯಾಣ ಚಾಳುಕ್ಯರ ಶಾಸನಗಳಲ್ಲಿ ಕಾಣಬಹುದು. ಅರಸಿಕೇರಿಯನ್ನು ನೊಣಬನ ಅರಸಿಕೇರಿ ಎಂದು ಕೆರೆಗುಡಿಹಳ್ಳಿಯಲ್ಲಿರುವ ಕ್ರಿ.ಶ. ೧೫೨೮ರ ಶಾಸನವೊಂದು ತಿಳಿಸುತ್ತದೆ. ಪಾಂಡ್ಯರಂತು ಉಚ್ಚಂಗಿದುರ್ಗವನ್ನು ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ಮಾಡಿದರು.[4] ಹಾಗಾಗಿ ಇವರಿಗೆ ಉಚ್ಚಂಗಿಯ ಪಾಂಡ್ಯರೆಂದೇ ಗುರುತಿಸಲಾಗಿದೆ. ಕಲ್ಯಾಣ ಚಾಳುಕ್ಯರ ಅವಧಿಯ ಪೂರ್ವದಲ್ಲಿಯೇ ಉಚ್ಚಂಗಿದುರ್ಗದಲ್ಲಿ ಕೋಟೆಯೊಂದು ಕೋಟೆಯೊಂದು ನಿರ್ಮಾಣವಾಗಿದ್ದ ಉಲ್ಲೇಖಗಳು ಅಂದಿನ ಶಾಸನಗಳಿಂದ ತಿಳಿದುಬರುತ್ತದೆ.

ಕಡತಿ, ಹಲುವಾಗಿಲು, ಕುಂಚೂರುಗಳಲ್ಲಿ ಯಾದವರ ಶಾಸನಗಳಿವೆ.[5] ಉಚ್ಚಂಗಿದುರ್ಗ, ಅಲಗಿಲವಾಡ, ನೀಲಗುಂದ, ಬಾಗಳಿಯಲ್ಲಿ ಹೊಯ್ಸಳರ ಶಾಸನಗಳು ಕಂಡುಬರುತ್ತವೆ.[6] ಕ್ರಿ.ಶ. ೧೨೨೪ರ ನೀಲಗುಂದದ ಶಾಸನವೊಂದು ೨ನೇ ನರಸಿಂಹನ ತಂದೆ ಬಲ್ಲಾಳನು ಸೇವುಣರ ಸೈನ್ಯವನ್ನು ಸೊರಟೂರಿನಿಂದ ಕೃಷ್ಣವೇಣಿ ನದಿಯವರೆಗೆ ಏಕಾಂಗಿಯಾಗಿ ತಳ್ಳಿದನೆಂದು ತಿಳಿಸುತ್ತದೆ.[7] ಚಿರಸ್ತಹಳ್ಳಿ, ಉಚ್ಚಂಗಿದುರ್ಗ, ಹಲುವಾಗಿಲುಗಳಲ್ಲಿ ವಿಜಯನಗರದ ಶಾಸನಗಳು ಸಿಗುತ್ತವೆ. ಈ ಎಲ್ಲಾ ಶಾಸನಗಳಲ್ಲಿ ಹರಪನಹಳ್ಳಿ ಹೆಸರು ಕಂಡುಬರುವುದಿಲ್ಲ. ಹಾಗಾಗಿ ಹರಪನಹಳ್ಳಿ ಎಂಬ ಹೆಸರು ಹರಪನಹಳ್ಳಿ ಪಾಳೆಯಗಾರರ ಕಾಲದ್ದು. ಹರಪನಹಳ್ಳಿ ಹಾಗೂ ಹರಿಹರ ತಾಲೂಕಿನ ಎಲ್ಲಾ ಶಾಸನಗಳನ್ನು ಗಮನಿಸಲಾಗಿ ಉಚ್ಚಂಗಿದುರ್ಗದ ಕೋಟೆಯ ಕ್ರಿ.ಶ.೧೦ನೇ ಶತಮಾನಕ್ಕೆ ಮುಂಚನದೆಂದು ಅಂದಾಜಿಸಬಹುದು. ಹರಪನಹಳ್ಳಿ ಪಾಳೆಯಗಾರ ಶಾಸನ, ಹಸ್ತಪ್ರತಿಗಳಲ್ಲಿ ಮತ್ತು ಕೆಳದಿನೃಪ ವಿಜಯದಲ್ಲಿ ಹರಪನಹಳ್ಳಿ, ಬಾಗಳಿ, ಹಲುವಾಗಿಲು, ಚಿಗಟೇರಿ ಮತ್ತು ಬಂಡ್ರಿ ಕೋಟೆಗಳ ಪ್ರಸ್ತಾಪಗಳಿವೆ. ಹರಪನಹಳ್ಳಿ ತಾಲ್ಲೂಕಿನಲ್ಲಿ ಇರುವ ಮೇಲಿನ ಕೋಟೆಗಳ ಕುರಿತಾಗಿ ಮುಂದೆ ಚರ್ಚಿಸಲಾಗಿದೆ.

**ಕೋಟೆಯ ಅರ್ಥ ವಿವರಣೆ**

ಕೋಟೆ ಎಂದರೆ ಆವರಣವುಳ್ಳ ಪ್ರದೇಶ ಎಂದರ್ಥ. ಕೋಟೆ ಅಥವಾ ರಕ್ಷಾವರಣ ಇದನ್ನು ಸಂಸ್ಕೃತದಲ್ಲಿ ದುರ್ಗ ಎಂದು ಹೇಳುತ್ತಾರೆ. ದುರ್ಗ - ದುಗ್ಗ ಕಾವ್ಯದಲ್ಲಿ ಭಾಗಸಿಯುಗ್ಗಡದ ಘನವರ್ಗ ಮೂಲವನೆರೆದೊಡೀ ಭವದಾಹಗ ಹರೇ ದೇರುವನೆ ಮುಕ್ತಿಯ ದುಗ್ಗವನು ಎಂದಿದೆ. ಕೋಟೆಗೆ ಪುರ, ಪ್ರಕಾರ, ಕಿಲ್ಲೆ ಎಂಬ ಅರ್ಥಗಳು ಉಂಟು. "ಸೈನಿಕರುಗಳಿಂದ ಆವರಿಸಲ್ಪಟ್ಟ ರಕ್ಷಿತವಾದ ಮತ್ತು ರಕ್ಷಣೆಗೆ ಮುಡುಪಾಗಿರುವ ಗಟ್ಟಿಯಾದ ಸ್ಥಳವೇ ಕೋಟೆ ಎಂದೆನಿಸಿಕೊಳ್ಳುತ್ತದೆ." ಪ್ರಾಚೀನ ಗ್ರಂಥವಾದ ಋಗ್ವೇದದಲ್ಲಿ 'ಪುರ'ಗಳ ಉಲ್ಲೇಖವಿದೆ. ಪುರ ಅಂದರೆ ಭದ್ರವಾದಂತಹ ಕೋಟೆಯನ್ನು ಹೊಂದಿರುವ ಪಟ್ಟಣ ಎಂದರ್ಥ.

ಮಾನವನ ತನ್ನ ನಾಗರಿಕತೆಯ ಪ್ರಗತಿಯ ಪಥದಲ್ಲಿ ನಡೆದಂತೆ ತನ್ನ ಮತ್ತು ತನ್ನ ಸಮುದಾಯದ ಲೌಕಿಕ ಸಂಪತ್ತನ್ನು ಬೆಳೆಸುತ್ತಾ ನಡೆದನು. ಹಲವು ಕಿರು ಸಮುದಾಯಗಳು ಒಂದೆಡೆಯಲ್ಲಿ ನೆಲೆಗೊಂಡಾಗ ವಿವಿಧ ವಿಶಿಷ್ಟ ಹಿತಾಸಕ್ತಿಯ ಸಮಾಜಗಳು ನಿರ್ಮಾಣಗೊಂಡವು. ರಾಜ್ಯಗಳು - ಸಾಮ್ರಾಜ್ಯಗಳು ಉದಯವಾಗುದಕ್ಕಿಂತ ಮೊದಲು ಸಮಾಜದ ಜನರು ಸಣ್ಣ ಸಣ್ಣ ಗುಂಪುಗಳಾಗಿ ವಾಸಿಸುತ್ತಿದ್ದರು. ಕಾಲಕ್ರಮೇಣ ಈ ಗುಂಪುಗಳಲ್ಲಿ ಜನಸಂಖ್ಯೆ ಹೆಚ್ಚಾಗಿ ಅಥವಾ ಬೇರೆ ಗುಂಪುಗಳ ಜೊತೆಗೂಡಿ ಊರುಗಳಾದವು. ಈ ಪ್ರಕ್ರಿಯೆಗೆ ಮೂಲ ಕಾರಣ ಮನುಷ್ಯನ ಸಮಾಜ ಜೀವಿತ ಪ್ರಜ್ಞೆ. ಪ್ರಜ್ಞೆಯ ಪರಿಣಾಮವಾಗಿ ತನ್ನ ಸುತ್ತಲಿನ ಪರಿಸರದ ಅಭದ್ರತೆ ಬಗ್ಗೆ ಯೋಚಿಸಿದ. ಅಂತೆಯೇ ನೆಲೆ ನಿಂತಿದ್ದ ಊರಿನ ರಕ್ಷಣೆಗಾಗಿ ಕೋಟೆ ಕಟ್ಟಿಕೊಳ್ಳುವ ಅವಶ್ಯಕತೆ ಕಂಡುಬಂದಿತು. ಊರುಗಳು ಬೆಳೆದು ಹಲವಾರು ಊರುಗಳು ಒಟ್ಟುಗೂಡಿ ರಾಜ್ಯಗಳು ಸ್ಥಾಪನೆಯಾದ ಮೇಲೆ ಆಳುವ ಅರಸರು ತಮ್ಮ ರಾಜ್ಯಗಳನ್ನು ಸಂರಕ್ಷಿಸಿಕೊಳ್ಳಲು ರಾಜಧಾನಿಗಳಲ್ಲಿ ಹಾಗೂ ಗಡಿ ಪ್ರದೇಶಗಳಲ್ಲಿ ಬೃಹತ್ ಆಕಾರದ ಕೋಟೆಗಳನ್ನು ಕಟ್ಟಿಸಿದರು. ಹೀಗಾಗಿ ಪ್ರಾಚೀನ ಕಾಲದ ಮಾನವರ ರಕ್ಷಣೆಯ ಕಾರ್ಯದಲ್ಲಿ ಕೋಟೆ ಮಹತ್ತರ ಪಾತ್ರವಹಿಸಿದೆ. ಹಿಂದೆ ಯುದ್ಧಗಳು ನಡೆದಾಗ ಹೊರಗಿನ ಆಕ್ರಮಣ ತಡೆಯಲು ಕೋಟೆ ಕಟ್ಟಿಸಿಕೊಳ್ಳುವುದು ಅವಶ್ಯವಾಗಿತ್ತು. ಕೋಟೆಯು ರಾಜಕೀಯವೆಂಬ ದೇಹದ ಪ್ರಮುಖ ಹಾಗೂ ಅನಿವಾರ್ಯವಾದ ಅಂಗವಾಗಿದ್ದಿತು. ಯಾವುದೇ ರಾಜ್ಯದ ರಾಜಧಾನಿಯು ದೇಹದಲ್ಲಿನ ಹೃದಯವಿದ್ದಂತೆ ರಾಜಧಾನಿಯನ್ನು ವಶಪಡಿಸಿಕೊಂಡರೆ, ಸಾಮಾನ್ಯವಾಗಿ ಒಂದು ರಾಜ್ಯವು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿದ್ದಿತು. ಆದುದರಿಂದ ಕೋಟೆ ಅಥವಾ ದುರ್ಗದ ನಿರ್ಮಾಣವು ರಕ್ಷಣೆಯ ದೃಷ್ಟಿಯಿಂದ ಅತ್ಯವಶ್ಯವಾಗಿತ್ತು. ಜಿ.ಟಿ.ಡಾಟೆ ಪ್ರಕಾರ (Times of yore the Fortress was a capital means of defence) "ಪ್ರಾಚೀನ ಕಾಲದಲ್ಲಿ ಈ ಕೋಟೆಗಳು ರಾಜಧಾನಿಯ ರಕ್ಷಣೆಯ ಸಲುವಾಗಿ ಇರುವಂತಹವು." ಯಕ್ಸ್‌ರಂ ಸ್ಟ್ರೀಟ್‌ಪ್ರಕಾರ (Treatise on Fortification and Artil - lery observes Forts are equally usefull in offensive as defencive warfare) : ವಿರೋಧಿಗಳಿಂದ ಯುದ್ಧ ತಡೆಯುವುದಕ್ಕಾಗಿ ಮತ್ತು ರಕ್ಷಣೆಗಾಗಿ ಕೋಟೆಗಳ ತುಂಬಾ ಅನುಕೂಲಕರವಾಗಿದ್ದವು."

ಕೋಟೆ ರಚನೆಯ ಕುರಿತಾಗಿ ಪ್ರಸಿದ್ಧ ಕವಿಯಾದ ಹರಿಹರನು 'ಗಿರಿಜಾ ಕಲ್ಯಾಣ' ಎಂಬ ಕಾವ್ಯದಲ್ಲಿ ಕೊಟ್ಟಿರುವ ವಿವರ ಈ ಕೆಳಗಿನಂತಿದೆ.

ಪಳಕಿನ ಕೋಂಟೆ ಬಟ್ಟದನೆ ಬೇವಿನದಂಡೆ ನಭಕ್ಕೆ ಮೀರುವ
ಟ್ಟಳೆ ನಿರ್ಮಿದೇರು ಪಾರುವ ವಿರಾಜಿತ ಗೊಂಟು ಗೊಂಟಿನೊಳ್
ಬಳಸಿದ ಕೊತ್ತಳಂ ಸೊಗಯಿ ಪಾಳ್ವರಿ ಡೆಂಕಣಿ ಸಾರಮಾರಿಯ
ಗ್ಗಳಲಿಸುವ ಗೋಪುರಂ ಪುಲಿಮೊಗಂ ಮೆರುಗುಂ ಪುರದೊಳು ನಿರಂತರ ॥

ಹಳೇಗನ್ನಡದ ಕೋಂಟೆಯೇ ಹೊಸಗನ್ನಡದ ಕೋಟೆ. ಪಳಕಿನ (ಸ್ಫಟಿಕದ) ಕೋಟೆ ಎಂಬುದು ಕವಿಯ ಕಲ್ಪನೆ.

ಕಂಪಿಲರಾಯನ ದಂಡನಾಯಕನಾದ ಬೈಚಪ್ಪನು ಕೋಟೆಯನ್ನು ಸಿದ್ಧಮಾಡಿದ ಬಗೆಯನ್ನು ನಂಜುಂಡನು ರಾಮನಾಥ ಚರಿತೆಯಲ್ಲಿ ಈ ಕೆಳಗಿನಂತೆ ಹೇಳಿದ್ದಾನೆ.

ದಳವಾಡ ಸಹಿತ ಬೈಚಪ್ಪ ದುರ್ಗವ ಹೊಕ್ಕು
ತಳದವರ ಬಲಿಕೆಯನು
ಬಳಸಿ ಬಳಸಿ ನೋಡಿ ದುರ್ಗ ಸೌರಣೆಯನಂ
ದಲಸದೆ ಮಿಗೆ ಮೂಡಿಸಿದನು
ಅಗಳಾಳ್ವೇರಿ ಕೋಟೆ ಕೊತ್ತಳ ನೆಲದಿಡ್ಡಿ
ಮುಗಿಲಟ್ಟಣೆ ನೆಲಗಮ್ಮ
ಪ್ರಗಿಸಿ ಕೊಯೊಳಗಾಗಿಸಿಕೊಂಬ ಪಲಪುಲಿ
ಮೊಗಗಳನನು ಮೂಡಿಸಿದನು

ರಾಜರ ಮತ್ತು ಚಿಕ್ಕ ಸಂಸ್ಥಾನದ ಮುಖ್ಯಸ್ಥರ ಅತಿ ಹೆಚ್ಚಿನ ಬಲ ಈ ಕೋಟೆಗಳೇ. ಕೋಟೆಯಿಂದ ರಕ್ಷಿತವಾಗಿಲ್ಲದ ಪಟ್ಟಣಗಳನ್ನು ಶತ್ರುಗಳು ಬಹು ಸುಲಭವಾಗಿ ಸ್ವಾಧೀನಪಡಿಸಿಕೊಳ್ಳಬಲ್ಲರು. ಆದ್ದರಿಂದ ಆಳುವವರು ಅತ್ಯವಶ್ಯಕವಾಗಿ ಕೋಟೆಯನ್ನು ಕಟ್ಟಬೇಕೆಂದು ಸಾಮ್ರಾಜ್ಯ ಲಕ್ಷ್ಮಿ ಪೀಠಿಕಾದಲ್ಲಿ ಪ್ರಸ್ತಾಪವಾಗಿದೆ.

---

**(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

[1] SII IX (pt.1)No. 66 ಬಾಗಳಿ

[2] ದೇವರೊಂಡಾರೆಡ್ಡಿ ಮತ್ತು ಇತರರು, ೧೯೯೮. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ಬಳ್ಳಾರಿ ಜಿಲ್ಲೆ - ೧, ಪು.೧೮ ಹಂಪಿ. ಕನ್ನಡ ವಿಶ್ವವಿದ್ಯಾಲಯ

[3] ಅದೇ, ಪು.೨೫

[4] ಕೊಟ್ರೇಶ್,ಎಂ.೧೯೯೬, ಉಚ್ಚಂಗಿದುರ್ಗ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ ಎಂ.ಫಿಲ್.ಪ್ರಬಂಧ, ಪು.೧೮ ಹಂಪಿ ಕನ್ನಡ ವಿಶ್ವವಿದ್ಯಾಲಯ

[5] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೧, ಪೂರ್ವೋಕ್ತ, ಪು.೩೨

[6] ಅದೇ, ಪು.೩೦

[7] ಅದೇ, ಪು.೩೨

***